# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
80,000
HAMPI TIMES E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ: 37 Issue: 37 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 02.08.2024 02.08.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2



SSLC
ಈ ಭಾರಿ ಫಲಿತಾಂಶ ನಮ್ಮದೆ
ದಿನಕ್ಕೊಂದು ವಿಷಯ ಪ್ರಶ್ನೋತ್ತರ ಸರಣಿ ಹೈಸ್ಕೋರ್ ಗಳಿಸಲು ನಿತ್ಯ ಬರೆದಿಟ್ಟುಕೊಂಡು ಓದಿ
ಪುಟ. 4ರಲ್ಲಿ
ನಿನ್ನ ಏಳಿಗೆಗೆ ನೀನೇ ಶಿಲ್ಪಿ
ನಿಮ್ಮ ಅಭಿಪ್ರಾಯಗಳನ್ನು ಇ-ಮೇಲ್ ಮಾಡಿ
ಹಂಪಿ ಟೈಮ್ಸ್ ಬಳಗ ವಿಜಯನಗರ
E-mail: hampitimes@gmail.com


# ಗರ್ಭಾಶಯ ತೊಂದರೆಗೆ ಸರಳ ಚಿಕಿತ್ಸೆ

## ಸ್ತ್ರೀರೋಗ ತಜ್ಞ ಪ್ರೊ.ಡಾ. ಒಸಮಾ ಹೇಳಿಕೆ | ಹಿಸ್ಟರೊಸ್ಕೊಪಿಯಿಂದ ನೋವು ರಹಿತ, ಕಡಿಮೆ ಅವಧಿಯಲ್ಲಿ ಗುಣಾತ್ಮಕ ಚಿಕಿತ್ಸೆ

**ಹಂಪಿ ಟೈಮ್ಸ್ ಹೊಸಪೇಟೆ**

ಮಹಿಳೆಯರ ಗರ್ಭಾಶಯದ ತೊಂದರೆಗಳನ್ನು ತ್ವರಿತವಾಗಿ ಪತ್ತೆಹಚ್ಚಲು ಹಿಸ್ಟರಿಸ್ಕೊಪಿ (hystero scopy) ಚಿಕಿತ್ಸಾ ವಿಧಾನ ತುಂಬಾ ಸಹಾಯಕ ವಾಗುತ್ತದೆ. ಹಿಸ್ಟರೋಸ್ಕೋಪಿ ಮೂಲಕ ಗರ್ಭಾಶಯದ ಆವರ್ತನೆ, ಪೋಲಿಪ್ಸ್, ಫೈಬ್ರಾಯ್ಡ್ಸ್, ಅಥವಾ ಅನ್ಯ ಅನಿಶ್ಚಿತತೆಗಳನ್ನು ಅಚ್ಚುಕಟ್ಟಾಗಿ ಕಂಡುಹಿಡಿಯಬಹುದು ಎಂದು ಈಜಿಪ್ಟ್‌ನ ಕೈರೋ ವಿಶ್ವವಿದ್ಯಾಲಯ ಪ್ರಸೂತಿ ತಜ್ಞ ಹಾಗೂ ಸ್ತ್ರೀರೋಗ ತಜ್ಞರಾದ ಪ್ರೊ.ಡಾ. ಒಸಮಾ ಅಹ್ಮದ್ ಶಾವ್ಕಿ ಯಕೂತ್ ಹೇಳಿದರು.

ನಗರದ ಶ್ರೀಕರಿ ಆಸ್ಪತ್ರೆವತಿಯಿಂದ ಪ್ರಿಯದರ್ಶಿನಿ ಪ್ರೈಡ್ ಸಭಾಂಗಣದಲ್ಲಿ ಗುರುವಾರ ವೈದ್ಯರಿಗಾಗಿ ಆಯೋಜಿಸಲಾಗಿದ್ದ ಒಂದು ದಿನದ ಹಿಸ್ಟರೊಸ್ಕೊಪಿ ಕಾರ್ಯಾಗಾರದಲ್ಲಿ ವಿಶೇಷ ಉಪನ್ಯಾಸ ನೀಡುತ್ತಾ ಮಾತನಾಡಿದರು. ಹೊಸ ಆವಿಷ್ಕಾರಗಳು ಮತ್ತು ಅತ್ಯಾಧುನಿಕ ತಂತ್ರಜ್ಞಾನಗಳ ಬಗ್ಗೆ ವೈದ್ಯರು ಹೆಚ್ಚು ತಿಳಿದುಕೊಂಡಾಗ ರೋಗಿಗಳಿಗೆ ಉತ್ತಮ ಚಿಕಿತ್ಸೆ ಕೊಡಲು ಸಾಧ್ಯವಾಗುತ್ತದೆ. ಹಿಸ್ಟರೊಸ್ಕೊಪಿ ಮಹಿಳೆಯರ ಗರ್ಭಾಶಯದ ಒಳಭಾಗವನ್ನು ವೀಕ್ಷಿಸಲು ಬಳಸಲಾಗುತ್ತದೆ. ಗರ್ಭಾಶಯದ ಸ್ಥಿತಿಗತಿಯನ್ನು ನಿರ್ದಿಷ್ಟವಾಗಿ ನಿರ್ಣಯಿಸಬಹುದಾಗಿದೆ. ಅನೇಕ ರೋಗಗಳ ಶಸ್ತ್ರಚಿಕಿತ್ಸೆಗೂ ಸಹಕಾರಿಯಾಗಿದೆ. ಗರ್ಭಾಶಯದ ಪೋಲಿಪ್ಸ್ ಅಥವಾ ಫೈಬ್ರಾಯ್ಡ್ಸ್ ತೆರವು, ಅಥವಾ ಗರ್ಭಾಶಯದ ಆವರ್ತನೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ತುಂಬಾ ಅನುಕೂಲವಾಗಿದೆ. ಹಿಸ್ಟರೊಸ್ಕೋಪಿಯು ಸಾಮಾನ್ಯ ಪ್ರಕ್ರಿಯೆಯಾಗಿದ್ದು, ಇದರ ಮೂಲಕ ಚಿಕಿತ್ಸೆ ಪಡೆದವರು ಕಡಿಮೆ ನೋವಿನೊಂದಿಗೆ ಬೇಗನೆ ಗುಣಮುಖರಾಗುತ್ತಾರೆ ಅಲ್ಲದೆ ಚಿಕಿತ್ಸೆ ಪಡೆದ ದಿನವೇ ಮನೆಗೆ ಹಿಂತಿರುಗಬಹುದು.

ಮಕ್ಕಳನ್ನು ಹೊಂದಲು ತೊಂದರೆ ಇರುವ ಮಹಿಳೆಯರ ಗರ್ಭಾಶಯದ ತೊಂದರೆಗಳನ್ನು ತ್ವರಿತವಾಗಿ ಪತ್ತೆಹಚ್ಚಲು ಇದು ಅತ್ಯಂತ ಸಹಾಯಕ ವಾಗುತ್ತದೆ. ರಕ್ತಸ್ರಾವ ಕಡಿಮೆ, ಶಸ್ತ್ರಚಿಕಿತ್ಸಾ ಸಮಯ ಕಡಿಮೆ ಮತ್ತು ಕಡಿಮೆ ಸಮಯದಲ್ಲೆ ಚೇತರಿಕೆ ದೊರೆಯುವುದರಿಂದ ಸ್ತ್ರೀರೋಗ ತಜ್ಞರು ಸಮರ್ಥವಾಗಿ







ಈ ವಿಧಾನವನ್ನು ಬಳಸುವ ಮೂಲಕ ವಿವಿಧ ಸ್ತ್ರೀಯರ ಸಮಸ್ಯೆಗಳಿಗೆ ಸಮರ್ಥ ಪರಿಹಾರ ಒದಗಿಸಲು ಮುಂದಾಗಬೇಕು ಎಂದರು.

ಸ್ತ್ರೀರೋಗ ತಜ್ಞ ವೈದ್ಯರಿಗೆ ವೀಡಿಯೋ ಮೂಲಕ ಚಿಕಿತ್ಸೆಯ ಕುರಿತು ಲೈವ್ ಡೆಮೋ ನೀಡಿದರು. ನಂತರ ವೈದ್ಯರಲ್ಲಿನ ಕೆಲ ಗೊಂದಲಗಳಿಗೆ ಪರಿಹಾರ ಸೂಚಿಸಿ, ವೈದ್ಯರಲ್ಲಿ ಆತ್ಮಸ್ಥೈರ್ಯ ಚೈತನ್ಯ ತುಂಬಿದರು. ಜಿಲ್ಲೆ ಸೇರಿದಂತೆ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಿಂದ 100ಕ್ಕು ಅಧಿಕ ಸ್ತ್ರೀರೋಗ ತಜ್ಞರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಆರೋಗ್ಯ ಇಲಾಖೆಯ ಆರ್‌ಸಿಎಚ್‌ಓ ಡಾ.ಜಂಬಯ್ಯ ಮಾತನಾಡಿ, ನಗರದಲ್ಲಿ ಸ್ತ್ರೀರೋಗ ತಜ್ಞರಿಗೆ ಕಾರ್ಯಗಾರಗಳ ಮೂಲಕ ವೈದ್ಯಕೀಯ ಅರಿವು ಮೂಡಿಸುತ್ತಿರುವ ಶ್ರೀಕರಿ ಆಸ್ಪತ್ರೆಯ ಕಾರ್ಯ ಶ್ಲಾಘನೀಯ. ಜಿಲ್ಲಾ ಕೇಂದ್ರವಾಗಿರುವ ಹೊಸಪೇಟೆಯಲ್ಲಿ ಇಂತಹ ಕಾರ್ಯಾಗಾರಗಳು ನಡೆಯುವುದರಿಂದ ಹಿರಿಯ ಹಾಗೂ ಯುವ ವೈದ್ಯರಿಗೆ ಹೆಚ್ಚು ಅನುಕೂಲವಾಗಲಿದೆ ಎಂದರು.

ಶ್ರೀಕರಿ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಎಸ್. ಗಂಗೋತ್ರಿ ಮಾತನಾಡಿ, ವೈದ್ಯಕೀಯ ಕ್ಷೇತ್ರದಲ್ಲೂ ಹೊಸ ಆವಿಷ್ಕಾರಗಳು ನಡೆಯುತ್ತಲಿವೆ. ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಶ್ರೀಕರಿ ಆಸ್ಪತ್ರೆ ವಿಶೇಷ ಕಾರ್ಯಾಗಾರಗಳನ್ನು ಹಮ್ಮಿಕೊಂಡು ಬರುತ್ತಿದೆ. ಈಜಿಪ್ಟ್‌ನ ಹಿರಿಯ ಸ್ತ್ರೀರೋಗ ತಜ್ಞರು ಹೊಸಪೇಟೆಗೆ ಬಂದು ಉಪನ್ಯಾಸ ನೀಡುತ್ತಿರುವುದು ನಮ್ಮ ಸೌಭಾಗ್ಯವಾಗಿದೆ ಎಂದರು.

ವೈದ್ಯರಾದ ಡಾ.ಡಿ.ಕಸ್ತೂರಿ, ಎಸ್‌ಡಿಎಂ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ.ರತ್ನಮಾಲ ದೇಸಾಯಿ., ಗಂಗಾವತಿಯ ಮುಖ್ಯ ಆರೋಗ್ಯಾಧಿಕಾರಿ ಡಾ.ಈಶ್ವರ ಸವದಿ,, ವಿಜಿಎಸ್ ಅಧ್ಯಕ್ಷರಾದ ಡಾ.ಶಶಿಕಲಾ ಗುಗ್ರಿ ಉಪಸ್ಥಿತರಿದ್ದರು.

ಶ್ರೀ ಕರಿ ಆಸ್ಪತ್ರೆಯ ಡಾ.ಶಿವರಾಜ ಮತ್ತು ಎಸ್. ದೇವಿಕಾಮಾಲಿನಿ ಅವರು ಗಣ್ಯರನ್ನು ಸನ್ಮಾನಿಸಿದರು. ಡಾ.ಎಸ್.ರೇಖಾ ನಿರ್ವಹಿಸಿದರು.

### ಹೊಸಪೇಟೆ ಇತಿಹಾಸ ಹೇಳಿದ ಈಜಿಪ್ಷಿಯನ್ ವೈದ್ಯ

ವಿಜಯನಗರ ಸಾಮ್ರಾಜ್ಯದ ಹೊಸಪೇಟೆ ಪಟ್ಟಣ ವಾಗುವ ಮುನ್ನ ವಿಜಯನಗರದ ಅರಸ ಶ್ರೀಕೃಷ್ಣದೇವರಾಯ ತನ್ನ ತಾಯಿಯ ಹೆಸರಲ್ಲಿ ನಾಗಲಾಪುರ ಎಂಬ ಪಟ್ಟಣವನ್ನು ನಿರ್ಮಿಸಿದ್ದರು. ಇದು ತಾಯಿಯ ಮೇಲಿನ ಗೌರವ ಸೂಚಿಸುತ್ತದೆ. ಈಗ ಹೊಸಪೇಟೆ ಎಂಬ ಹೆಸರಿನಿಂದ ಕರೆಯ ಲಾಗುತ್ತಿದೆಯಾದರೂ ಇತಿಹಾವನ್ನು ಯಾರೂ ಮರೆಯಬಾರದು. ಈ ನೆಲದಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚಿನ ಗೌರವ ನೀಡಲಾಗುತ್ತದೆ ಎಂಬದುನ್ನು ಇತಿಹಾಸ ಸಾರುತ್ತಿದೆ. ವಿದೇಶಿಯರು ಈ ನೆಲದ ಮಹಿಮೆ ಓದಿ ರೋಮಾಂಚನಗೊಳ್ಳುತ್ತಾರೆ. ಇತಿಹಾಸ ಗೊತ್ತಿಲ್ಲದವರು ಗೂಗಲ್ ಸರ್ಚ್‌ಮಾಡಿ ತಿಳಿಯರಿ ಎಂದು ಈಜಿಪ್ಟ್‌ನ ಕೈರೋ ವಿಶ್ವವಿದ್ಯಾಲಯ ಪ್ರಸೂತಿ ತಜ್ಞ ಹಾಗೂ ಸ್ತ್ರೀರೋಗ ತಜ್ಞರಾದ ಪ್ರೊ.ಡಾ. ಒಸಮಾ ಅಹ್ಮದ್ ಶಾವ್ಕಿ ಯಕೂತ್ ಹೇಳುವ ಮೂಲಕ ಅಲ್ಲಿದ್ದ ವೈದ್ಯರನ್ನು ಕೆಲಕ್ಷಣ ಪರೀಕ್ಷೆಗೊಡ್ಡಿದರು. ಕೊನೆಗೆ ಎಲ್ಲ ವೈದ್ಯರೊಂದಿಗೆ ಫೋಟೋ ತೆಗೆಸಿಕೊಂಡು ಸಂತಸ ಹಂಚಿಕೊಂಡರು.

ಶ್ರೀಕರಿ ಆಸ್ಪತ್ರೆವತಿಯಿಂದ 47 ಸ್ತ್ರೀಯರಿಗೆ ಉಚಿತವಾಗಿ ಸಂತಾನ ಹರಣ ಶಸ್ತ್ರಚಿಕಿತ್ಸೆಯನ್ನು ಹಿಸ್ಟೋರೊಸ್ಕೊಪಿ ಮೂಲಕ ಕಡಿಮೆ ಅವಧಿಯಲ್ಲಿ ಹೆಚ್ಚು ಜನರಿಗೆ ಮಾಡಲಾಗಿದೆ. ವಿಶೇಷ ಹಾಗೂ ವಿಶಿಷ್ಟ ಅನುಭವವನ್ನು ನೀಡಿದೆ. ಕಾರ್ಯಾಗಾರದಲ್ಲಿ ನೂರಕ್ಕು ಅಧಿಕ ವೈದ್ಯರು ಪಾಲ್ಗೊಂಡು ಪ್ರಯೋಜನಪಡೆದಿದ್ದಾರೆ.

**– ಡಾ. ಎಸ್.ಗಂಗೋತ್ರಿ, ಸ್ತ್ರೀರೋಗ ತಜ್ಞರು**

## ಮೈಕ್ರೋ ನ್ಯೂಸ್

### ಆಗಸ್ಟ್ 5ರಂದು ಫೋನ್-ಇನ್ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ಪ್ರಯಾಣಿಕರ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಸಾರ್ವಜನಿಕ ಪ್ರಯಾಣಿಕರಿಗೆ ಸಮರ್ಪಕ ಸಾರಿಗೆ ಸೌಲಭ್ಯ ಹಾಗೂ ಸಲಹೆ ಗಳನ್ನು ಸ್ವೀಕರಿಸಿ ಕಲ್ಪಿಸುವ ನಿಟ್ಟಿನಲ್ಲಿ ಆಗಸ್ಟ್ 05 ರಂದು ಮಧ್ಯಾಹ್ನ 3.30 ರಿಂದ 5.30ರವರೆಗೆ ಫೋನ್–ಇನ್ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕ ಪ್ರಯಾಣಿಕರು ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳು ಸಾರಿಗೆ ಸೌಲಭ್ಯದ ಕೊರತೆ ಕಂಡುಬಂದಲ್ಲಿ ದೂರವಾಣಿ ಸಂಖ್ಯೆ ಮೊ:7760992302, 6366423886ಗೆ ಕರೆ ಮಾಡಿ ತಮ್ಮ ಸಮಸ್ಯೆಗಳನ್ನು ತಿಳಿಸಲು ಕೋರಲಾಗಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೊಸಪೇಟೆ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

### ಕಾನೂನು ಪದವೀಧರರ ವೃತ್ತಿ ತರಬೇತಿ, ಶಿಷ್ಯ ವೇತನ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿಗೆ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಸಮುದಾಯದ ಕಾನೂನು ಪದವೀಧರರ ವೃತ್ತಿ ತರಬೇತಿ ಶಿಷ್ಯವೇತನ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಶಿಷ್ಯವೇತನ ಪಡೆಯಲು ಇಚ್ಚಿಸುವ ಕಾನೂನು ಪದವೀಧರರು ಭರ್ತಿ ಮಾಡಿದ ಅರ್ಜಿಯನ್ನು ಆಗಸ್ಟ್ 31 ರೊಳಗೆ ಹೊಸಪೇಟೆಯ ಅಂಬೇಡ್ಕರ್ ಸರ್ಕಲ್ ಹತ್ತಿರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಕಚೇರಿಗೆ ಸಲ್ಲಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ

### ಅಕಾಡೆಮಿ ಬಾಲಗೌರವ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಕರ್ನಾಟಕ ಬಾಲವಿಕಾಸ ಅಕಾಡೆಮಿಯಿಂದ 2023–24ನೇ ಸಾಲಿನಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರ್‌ರಾಷ್ಟ್ರ ಮಟ್ಟದಲ್ಲಿ ವಿಶೇಷ ಸಾಧನೆಗೈದ 18 ವರ್ಷದ ಒಳಗಿನ ಮಕ್ಕಳಿಂದ ಬಾಲಗೌರವ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಈ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಲು ಮಕ್ಕಳು ಕ್ರೀಡೆ, ಸಂಗೀತ, ನೃತ್ಯ, ಬಹುಮುಖ ಪ್ರತಿಭೆ, ನಟನೆ, ಚಿತ್ರಕಲೆ, ಹಾಗೂ ವಿಜ್ಞಾನ ಮತ್ತು ಸಂಶೋಧನೆಯಲ್ಲಿ ಹೀಗೆ 07 ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿ ಪ್ರಶಸ್ತಿ ಪಡೆದ ಪುರಸ್ಕೃತ ಮಗುವಾಗಿರಬೇಕು. ಇಂತಹ ಮಕ್ಕಳು ಅಕಾಡೆಮಿ ಬಾಲಗೌರವ ಪ್ರಶಸ್ತಿಗಾಗಿ ತಮ್ಮ ಸ್ವಯಂ ದೃಢೀಕೃತ ನಕಲು ದಾಖಲೆಗಳೊಂದಿಗೆ ಹಾಗೂ ಸ್ವ–ವಿವರಗಳ ನ್ನೊಳಗೊಂಡ ಮನವಿಯೊಂದಿಗೆ ಅರ್ಜಿಯನ್ನು ಆಗಸ್ಟ್ 26ರೊಳಗಾಗಿ ಅಕಾಡೆಮಿಯ ಕೇಂದ್ರ **ಕಚೇರಿ ವಿಳಾಸ:** ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಕೇಂದ್ರ ಕಚೇರಿ ವಿಳಾಸ: ಯೋಜನಾಧಿಕಾರಿಗಳು, ಚಂದ್ರಿಕಾ ಲೇ ಔಟ್ ಹಿಂಭಾಗ, ಕೆ.ಹೆಚ್.ಬಿ ಕಾಲೋನಿ, ಲಕಮನಹಳ್ಳಿ ಧಾರವಾಡ–580004, ದೂರವಾಣಿ ಸಂಖ್ಯೆ: 0836–2465490, ಇಲ್ಲಿಗೆ ಪೋಸ್ಟ್ ಮುಖಾಂತರ ತಲುಪುವಂತೆ ಕಳುಹಿಸಬೇಕು. ಪ್ರಶಸ್ತಿಯ ಅರ್ಜಿ ನಮೂನೆ/ ಮಾನದಂಡಗಳನ್ನು ಕಚೇರಿಯ ವೆಬ್‌ಸೈಟ್ ಲಿಂಕ್ https://balavikasacademy.karnataka.gov.in/ ನಲ್ಲಿ ವೀಕ್ಷಿಸಬಹುದಾಗಿದೆ

## ಡಾ.ಮಹಾಂತ ಶಿವಯೋಗಿಗಳ ಜನ್ಮದಿನದ ನಿಮಿತ್ತ ವ್ಯಸನ ಮುಕ್ತ ದಿನಾಚರಣೆ

# ಕೆಟ್ಟ ಹವ್ಯಾಸಗಳು ಸಾಧನೆಗೆ ಅಡ್ಡಿ

## ಅಪರ ಜಿಲ್ಲಾಧಿಕಾರಿ ಅನುರಾಧ ಜಿ ಹೇಳಿಕೆ | ಸನ್ಮಾರ್ಗವೇ ನಮ್ಮ ಆಯ್ಕೆಯಾಗಲಿ



**ಹಂಪಿ ಟೈಮ್ಸ್ ಹೊಸಪೇಟೆ**

ಮದ್ಯಪಾನ, ಮಾದಕ ವಸ್ತು, ತಂಬಾಕು ವಸ್ತುಗಳ ಸೇವನೆಯು ಆರೋಗ್ಯಕ್ಕೆ ಹಾನಿಕರವಾಗಿದ್ದು, ಭವಿಷ್ಯದಲ್ಲಿನ ಸಾಧನೆಗೆ ಅಡ್ಡಿಯಾಗಿ ಜೀವನದ ನೆಮ್ಮದಿಯನ್ನೆ ಕಸಿಯುತ್ತವೆ. ವಿದ್ಯಾರ್ಥಿ ಯುವಜನರು ಸೇರಿದಂತೆ ಪ್ರತಿಯೊಬ್ಬರು ವ್ಯಸನಮುಕ್ತರಾಗಿ ಮಾದರಿ ವ್ಯಕ್ತಿಗಳಾಗಿ ಬದುಕಬೇಕು ಎಂದು ಅಪರ ಜಿಲ್ಲಾಧಿಕಾರಿ ಅನುರಾಧ ಜಿ ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಆರೋಗ್ಯ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ವಿಜಯನಗರ ಜಿಲ್ಲೆ ಹಾಗೂ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಮತ್ತು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು ಇವರ ಸಹಯೋಗದಲ್ಲಿ ಶ್ರೀ ಶ್ರೀ ಮ.ನಿ.ಪ್ರ. ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯ ಅಂಗವಾಗಿ ಗುರುವಾರ ಜಿಲ್ಲಾಧಿಕಾರಿಗಳ ಕಚೇರಿಯ ಹಾಲ್‌ನಲ್ಲಿ ವ್ಯಸನ ಮುಕ್ತ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಜ್ಞಾನದ ಕಾರಣದಿಂದಲು ಸಹ ಬಹುತೇಕರು ಒಂದಿಲ್ಲೊಂದು ದುಶ್ಚಟಕ್ಕೆ ಒಳಗಾಗಿರುತ್ತಾರೆ. ಜೀವಕ್ಕೆ ಹಾನಿ ಎಂದು ಗೊತ್ತಿದ್ದು ಬಹುತೇಕರು ಕೆಟ್ಟ ಚಟಗಳಿಗೆ ಬಲಿಯಾಗುತ್ತಾರೆ. ವ್ಯಕ್ತಿಯೊಬ್ಬರಷ್ಟೇ ಅಲ್ಲ ಇಡೀ ಕುಟುಂಬದ ಸ್ವಾಸ್ತ್ಯ ಹಾಳಾಗುತ್ತದೆ ಎಂಬುದನ್ನು ಮೊದಲೇ ಅರಿತವರ ಬಾಳು ಸುಖಕರವಾಗಿರಲಿದೆ. ನಾನು ಈ ದಿನದಿಂದ ಯಾವುದೇ ದುಶ್ಚಟ ಮಾಡಲಾರೆ ಎಂದು ಸಂಕಲ್ಪ ಮಾಡುವ ಮನೋಭಾವ ಬೆಳೆಸಿಕೊಂಡಲ್ಲಿ ಉತ್ತಮ ಆರೋಗ್ಯ ಮತ್ತು ನೆಮ್ಮದಿ ಸಾಧ್ಯವಾಗಲಿದೆ ಎಂದು ಸಲಹೆ ನೀಡಿದರು. >>3

### ಪ್ರತಿಜ್ಞಾವಿಧಿ

**'ಮದ್ಯಪಾನ, ಮಾದಕ ವಸ್ತು, ತಂಬಾಕು ವಸ್ತುಗಳ ಸೇವನೆಯು ನನಗೆ ಮತ್ತು ಮಾನವ ಸಮಾಜಕ್ಕೆ ಮಾರಕವೆಂದು ಇದರಿಂದ ಮಾನವನ ದೇಹವಲ್ಲದೇ ಮನಸ್ಸು ಮತ್ತು ಸ್ವಾಸ್ತ್ಯ, ಸಮಾಜ ಅನಾರೋಗ್ಯ ಪೀಡಿತವಾಗುತ್ತಿರುವುದು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶದ ಯುವಜನತೆ ಇದರ ದಾಸ್ಯಕ್ಕೆ ಒಳಗಾಗುತ್ತಿರುವುದು ತಿಳಿದಿದೆ. ಇದರಿಂದ ಮಾನವನ ಆರ್ಥಿಕ, ಸಾಮಾಜಿಕ ಸ್ಥಿತಿ ಅಧೋಗತಿಗೆ ಇಳಿಯುತ್ತಿದೆ. ಆದ್ದರಿಂದ ಪೂಜ್ಯ ಶ್ರೀ ಮ. ನಿ. ಪ್ರ. ಡಾ.ಮಹಾಂತ ಶಿವಯೋಗಿಗಳ ಸ್ವಾಮೀಜಿಗಳ ಜನ್ಮದಿನದ ಈ ಶುಭದಿನದಂದು ನಾನು ಮದ್ಯಪಾನ, ಮಾದಕ ವಸ್ತು, ತಂಬಾಕು ವಸ್ತುಗಳನ್ನು ತ್ಯಜಿಸುತ್ತೇನೆ. ಹಾಗೂ ಇನ್ನೆಂದಿಗೂ ಮುಟ್ಟುವುದಿಲ್ಲ ಹಾಗೂ ನನ್ನ ನೆರೆ ಹೊರೆಯವರಿಗೆ ಬಂಧ–ಬಾಂಧವರಿಗೆ ಸ್ನೇಹಿತರಿಗೆ ಈ ಬಗ್ಗೆ ತಿಳಿವಳಿಕೆ ನೀಡುತ್ತೇನೆ' ಎಂದು ಶಾಲಾ ಕಾಲೇಜು ವಿದ್ಯಾರ್ಥಿಗಳು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.**


ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ
ನಿಮ್ಮ ಮಾತೃಭಾಷೆಯಲ್ಲೇ ಸುದ್ದಿ, ಲೇಖನ ಓದಿರಿ
www.hampitimes.com



## ವಿಜ್ಞಾನ

# ಇರುವೆಗಳು ಏಕೆ ಸಾಲಾಗಿ ಚಲಿಸುತ್ತವೆ?

■ ಆರ್.ಬಿ.ಗುರುಬಸವರಾಜ

ಮನೆಯ ಪಕ್ಕದ ಕೈತೋಟದಲ್ಲಿ ಹೂ ಕೀಳಲು ಹೋದ ಅನುಷ ಇರುವೆಗಳ ಸಾಲು ನೋಡಿದಳು. ಎಲ್ಲಾ ಇರುವೆಗಳು ಶಿಸ್ತಿನ ಸಿಪಾಯಿಯಂತೆ ಸಾಲಾಗಿ ಚಲಿಸುವುದನ್ನು ಕಂಡು ಅಚ್ಚರಿಯಾಯಿತು. ಈ ವಿಷಯವನ್ನು ಶಾಲೆಯಲ್ಲಿ ಶಿಕ್ಷಕರೊಂದಿಗೆ ಪ್ರಸ್ತಾಪಿಸಿ "ಸರ್, ಇರುವೆಗಳು ಏಕೆ ಸಾಲಾಗಿ ಚಲಿಸುತ್ತವೆ?" ಎಂದು ಪ್ರಶ್ನಿಸಿದಳು. ಅದಕ್ಕೆ ಶಿಕ್ಷಕರು ಹೀಗೆ ಹೇಳಿದರು.

ಇರುವೆಗಳು ಅತ್ಯಂತ ಚಿಕ್ಕ ಜೀವಿಗಳಾಗಿದ್ದರೂ ಶಿಸ್ತು, ಶ್ರಮ ಮತ್ತು ಕ್ರಮಬದ್ಧತೆಗೆ ಹೆಸರುವಾಸಿಯಾದ ಜೀವಿಯಾಗಿವೆ. ಆಹಾರ ಸಂಗ್ರಹಣೆ ಮತ್ತು ವಂಶಾಭಿವೃದ್ಧಿಯಲ್ಲಿ ಸದಾ ಬ್ಯುಸಿಯಾಗಿರುವ ಜೀವಿ. ಮಾನವರಾದ ನಾವು ಇರುವೆಗಳಿಂದ ಕಲಿಯಬೇಕಾದುದು ತುಂಬಾ ಇದೆ. ಇರುವೆಗಳು ಸಾಲಾಗಿ ಚಲಿಸಲು ಮುಖ್ಯ ಕಾರಣ ಅವು ಪರಸ್ಪರ ಸಂವಹನ ನಡೆಸಲು ಫೆರೋಮೋನ್ಸ್ ಎಂಬ ರಾಸಾಯನಿಕ ಸಂಕೇತಗಳನ್ನು ಬಳಸುತ್ತವೆ. ಇರುವೆಯು ಆಹಾರವನ್ನು



ಹುಡುಕಿ, ಅದು ಇತರ ಇರುವೆಗಳನ್ನೂ ಆಹ್ವಾನಿಸುತ್ತದೆ. ಇತರೆ ಇರುವೆಗಳು ಆಹಾರದ ಮೂಲವನ್ನು ಹುಡುಕಲು ಅನುಕೂಲವಾಗುವಂತೆ ತಾವು ಚಲಿಸಿದ ಮಾರ್ಗದಲ್ಲಿ ಫೆರೋಮೋನ್ ರಸಾಯನಿಕ ವನ್ನು ಸ್ರವಿಸುತ್ತವೆ. ಇತರೆ ಇರುವೆಗಳ ಫೆರೋಮೋನ್ ಜಾಡು ಹಿಡಿದು ಆಹಾರವನ್ನು ಸುಲಭವಾಗಿ ಪತ್ತೆ ಹಚ್ಚುತ್ತವೆ. ಇರುವೆಗಳು ಸಾಲಾಗಿ ಚಲಿಸಲು ಇನ್ನೊಂದು ಕಾರಣ ಚಲನೆಯ ನಿಯಮಗಳನ್ನು ಕಾಪಾಡಿಕೊಳ್ಳುವುದು. ಅಂದರೆ ಇರುವೆಗಳ ಚಲನೆಗೆ ಇರುವ ಕ್ರಮಬದ್ಧತೆಯನ್ನು ಕಾಪಾಡಿಕೊಳ್ಳಲು ಮತ್ತು ಅವ್ಯವಸ್ಥಿತ ಚಲನೆಯ ತಡೆಯಲು ಸಾಲಾಗಿ ಚಲಿಸುತ್ತವೆ. ಇರುವೆಗಳು ತಮ್ಮ ವಸಾಹತು ಪ್ರದೇಶದಲ್ಲಿ ಸಾಮಾಜಿಕ ಕ್ರಮಾನುಗತ ಮತ್ತು ನಿರ್ದಿಷ್ಟ ಪಾತ್ರಗಳನ್ನು ಹೊಂದಿವೆ. ಸಾಲುಗಳಲ್ಲಿ ಚಲಿಸುವಿಕೆಯು ಪ್ರತಿ ಇರುವೆ ತನಗೆ ಗೊತ್ತುಪಡಿಸಿದ ಸ್ಥಳದಲ್ಲಿ ಉಳಿಯುತ್ತದೆ ಮತ್ತು ಅದಕ್ಕೆ ನಿಯೋಜಿಸಲಾದ ಕಾರ್ಯಗಳನ್ನು ನಿರ್ವಹಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು ಸಾಲುಗಳ ಚಲನೆ ಸಹಾಯ ಮಾಡುತ್ತದೆ.

ಇರುವೆಗಳು ಅನಗತ್ಯವಾಗಿ ಅಲೆದಾಡುವ ಪ್ರಮಾಣವನ್ನು ಕಡಿಮೆ ಮಾಡಿ ಸಾಲುಗಳಲ್ಲಿ ಚಲಿಸುವ ಮೂಲಕ ಶಕ್ತಿಯನ್ನು ಉಳಿಸುತ್ತವೆ. ಇದು ಶಕ್ತಿಯನ್ನು ಉಳಿಸಲು ಮತ್ತು ಗಳಿಸಿದ ಶಕ್ತಿಯನ್ನು ಪರಿಣಾಮಕಾರಿ ಕೆಲಸಗಳಿಗೆ ಬಳಸಲು ಸಹಕಾರಿಯಾಗಿದೆ. ಕಲ್ಲುಬಂಡೆಗಳು, ಮರದ ಕೊಂಬೆಗಳು ಅಥವಾ ಇತರ ಇನ್ನಿತರೇ ಅಡೆತಡೆಗಳನ್ನು ಎದುರಾದಾಗ, ಅವುಗಳಲ್ಲಿ ಸುಲಭವಾಗಿ ಮಾರ್ಗ ಕಂಡುಕೊಳ್ಳಲು ಫೆರೋಮೋನ್‌ಗಳು ಸಹಾಯ ಮಾಡುತ್ತವೆ. ಪರಸ್ಪರ ಸಂವಹನಕ್ಕಾಗಿ ಇರುವೆಗಳಸಾಲುಗಳ ಚಲನೆ ಅನಿವಾರ್ಯವಾಗಿದೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣೆಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಕರುಣಾಳು ಬಾ ಬೆಳಕೆ

ಸಮನ್ಯ ಇದೀಗ ತಾನೇ ಇಂಜಿನಿಯರಿಂಗ್ ಮುಗಿಸಿ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ದೊರೆತ ಕೆಲಸದ ಬೆನ್ನು ಹತ್ತಿ ರಾಜಧಾನಿ ಬೆಂಗಳೂರಿಗೆ ಬಂದಿಳಿದಿದ್ದಳು. ಆಕೆಯ ಜೊತೆಯಲ್ಲಿ ಓದುತ್ತಿದ್ದ ಆಕೆಯ ಸ್ನೇಹಿತರಲ್ಲಿ ರಾಜೇಶ್ ಮತ್ತು ಪ್ರೀತಿ ಕೂಡ ಆಕೆಯ ಜೊತೆ ಆಯ್ಕೆಯಾಗಿದ್ದರು. ಪ್ರೀತಿ ಮತ್ತು ಸಮನ್ಯ ಕಚೇರಿಗೆ ಹತ್ತಿರದಲ್ಲಿ ಇರುವ ಒಂದು ಪಿಜಿಯಲ್ಲಿ ವಾಸವಾಗಿದ್ದರೆ, ರಾಜೇಶ್ ತನ್ನ ಸ್ನೇಹಿತರೊಂದಿಗೆ ಬಾಡಿಗೆ ಮನೆಯೊಂದನ್ನು ಮಾಡಿಕೊಂಡು ವಾಸಿಸುತ್ತಿದ್ದನು. ಮೂವರು ಒಳ್ಳೆಯ ಸ್ನೇಹಿತರಾಗಿದ್ದರು. ಸಮನ್ಯ ತನ್ನದೇ ಊರಿನ ರಾಜೇಶನನ್ನು ಮನದಲ್ಲಿಯೇ ಪ್ರೀತಿಸುತ್ತಿದ್ದಳು. ಎಷ್ಟೋ ಬಾರಿ ರಾಜೇಶನಿಗೆ ತನ್ನ ಮನದಿಂಗಿತವನ್ನು ತಿಳಿಸಬೇಕೆಂಬ ಆಕೆಯ ಪ್ರಯತ್ನ ನಿಷ್ಫಲವಾಗುತ್ತಿತ್ತು. ಏನೇ ಆಗಲಿ ಈ ಬಾರಿ ಹೇಳಿಯೇ ತೀರುತ್ತೇನೆ ಎಂದು ಹೊಸ ವರ್ಷದ ದಿನ ತನ್ನೆಲ್ಲ ಧೈರ್ಯವನ್ನು ಒಗ್ಗೂಡಿಸಿಕೊಂಡು ಕಚೇರಿಗೆ ಹೊರಟಳು ಆಕೆ. ಪಕ್ಕದಲ್ಲಿದ್ದ ಸ್ನೇಹಿತೆ ಪ್ರೀತಿಗೂ ತನ್ನ ಗುಟ್ಟು ಬಿಟ್ಟು ಕೊಟ್ಟಿರಲಿಲ್ಲ. ಇಬ್ಬರು ಸ್ನೇಹಿತೆಯರು ಅಂದವಾಗಿ ಅಲಂಕರಿಸಿಕೊಂಡು ಪ್ರತಿದಿನದಂತೆ ಕ್ಯಾಬ್ ನಲ್ಲಿ ಆಫೀಸಿಗೆ ಬಂದರು.

ಆಫೀಸಿನ ಹೊರಭಾಗದಲ್ಲಿಯೇ ಸಾಂಪ್ರದಾಯಿಕ ಉಡುಗೆಯಲ್ಲಿ ತಯಾರಾಗಿದ್ದ ರಾಜೇಶ್ ಇವರಿಬ್ಬರನ್ನು ನಗುಮೊಗದಿಂದ ಎದುರುಗೊಂಡ. ರಾಜೇಶ್ ಮತ್ತು ಪ್ರೀತಿಯ ಉಡುಗೆಗಳು ಒಂದಕ್ಕೊಂದು ಮ್ಯಾಚ್ ಆಗಿರುವುದನ್ನು ಗಮನಿಸಿದ ಸಮನ್ಯ ಕುತೂಹಲಭರಿತಳಾಗಿ ಅವರಿಬ್ಬರೆಡೆ ಗಮನಹರಿಸಿದಾಗ ಅವರಿಬ್ಬರೂ ಕಣ್ಣಲ್ಲಿಯೇ ಪ್ರೀತಿಯ ಸಂಭಾಷಣೆಯನ್ನು ನಡೆಸಿದ್ದು ಗಮನಕ್ಕೆ ಬಂತು. ಆಕಾಶದಲ್ಲಿ ತೇಲುವ ಭಾವದಲ್ಲಿದ್ದ ಸಮನ್ಯಳನ್ನು ದೊಪ್ಪನೆ ಎತ್ತಿ ಭೂಮಿಗೆ ಎಸೆದಂತಾಯಿತು. ಕಾಲುಗಳಲ್ಲಿನ ಶಕ್ತಿ ಸೋರಿದಂತಾಗಿ ಆಸರೆಗಾಗಿ ಅಲ್ಲಿಯೇ ಇದ್ದ ಆಫೀಸಿನ ಹೊರಾವರಣದ ಕುರ್ಚಿಯಲ್ಲಿ ಕುಳಿತು ತುಸು ಸಾವರಿಸಿಕೊಂಡಳು.

ಒಬ್ಬರನ್ನೊಬ್ಬರು ನೋಡಿ ಮೈ ಮರೆತಿದ್ದ ರಾಜೇಶ್ ಮತ್ತು ಪ್ರೀತಿ ಕೂಡಲೇ ಧಾವಿಸಿ ಬಂದು 'ಏನಾಯಿತು' ಎಂದು ಕೇಳಿದಾಗ "ಏನೂ ಇಲ್ಲ, ಯಾಕೋ ಸ್ವಲ್ಪ ತಲೆ ಸುತ್ತು ಬಂದಂತಾಯಿತು, ತುಸು ರೆಸ್ಟ್ ಮಾಡಿದರೆ ಸಾಕು, ಸುಧಾರಿಸಿಕೊಳ್ಳುತ್ತೇನೆ" ಎಂದು ಹೇಳಿ ಅಲ್ಲಿಂದ ಕಾಲ್ತೆಗೆದ ಅವಳು ಸೀದಾ ವಾಶ್ರೂಮಿಗೆ ಹೋಗಿ ತನ್ನ ಮನದ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ದುಃಖವೆಲ್ಲವೂ ಬಸಿದು ಹೋಗುವಂತೆ ಕಣ್ಣೀರಿಟ್ಟಳು. ಬಹಳಷ್ಟು ಹೊತ್ತು ಅತ್ತು ಸಮಾಧಾನಗೊಂಡ ಆಕೆ ಮುಖ ತೊಳೆದು ಹೊರಬಂದವಳೇ ಪ್ರೀತಿಗೆ "ಆರೋಗ್ಯದಲ್ಲಿ ವ್ಯತ್ಯಾಸ ವಾಗುತ್ತಿದೆ, ನಾನು ಪಿಜಿಗೆ ಮರಳಿ ಹೋಗುತ್ತೇನೆ, ಬಾಸ್ ಕೇಳಿದರೆ ಹೇಳಿಬಿಡು" ಎಂದು ಹೇಳಿ ಕ್ಯಾಬ್ ನಲ್ಲಿ ಪಿಜಿ ತಲುಪಿ ತನ್ನ ಕೋಣೆ ಸೇರಿದವಳೇ ತನ್ನ ಮಂಚದ ಮೇಲೆ ಬೋರಲಾಗಿ ಮತ್ತೊಮ್ಮೆ ಹಿಡಿದಿಟ್ಟ ಎಲ್ಲ ದುಃಖವನ್ನು ಹೊರ ಹಾಕಿದಳು. ರಾಜೇಶನೊಂದಿಗೆ ಬದುಕು ಕಳೆಯಬೇಕೆಂಬ ಆಕೆಯ ಆಶಾ ಗೋಪುರ ಕಟ್ಟುವ ಮುನ್ನವೇ ಉರುಳಿ ಬಿದ್ದಂತಾಗಿತ್ತು.

ಸಂಜೆ ಪಾರ್ಟಿ ಮುಗಿಸಿ ಪ್ರೀತಿ ಪಿ ಜಿ ಗೆ ಬರುವ ಮುನ್ನವೇ ತನ್ನ ಅಜ್ಜಿಯ ಊರಿಗೆ ಹೊರಡುವ ನಿರ್ಧಾರ ಮಾಡಿ ತನ್ನಮ್ಮನಿಗೆ ಕರೆ ಮಾಡಿ ಒಂದೆರಡು ದಿನ ಅಜ್ಜಿಯ ಊರಿಗೆ ಹೋಗುವುದಾಗಿ ಹೇಳಿ, ಪ್ರೀತಿಗೂ ಮೆಸೇಜ್ ಮಾಡಿ ಒಂದೆರಡು ಜೊತೆ ಬಟ್ಟೆಗಳನ್ನು ಪ್ಯಾಕ್



ಮಾಡಿಕೊಂಡು ಅಜ್ಜಿಯ ಊರಿಗೆ ಪಯಣ ಬೆಳೆಸಿದಳು. ಊರಿಗೆ ಬಂದ ಮೊಮ್ಮಗಳನ್ನು ಕಂಡು ಅಜ್ಜಿ ಪ್ರೀತಿಯಿಂದ ರಮಾಡಿಕೊಂಡರು. ಅನುಭವದಿಂದ ಮಾಗಿದ ಅಜ್ಜಿ ಮೊಮ್ಮಗಳ ಹಾವಭಾವ ಮತ್ತು ನಡೆಗಳಿಂದ ಏನೋ ಸಮಸ್ಯೆಯಾಗಿದೆ ಎಂದು ಅರಿತರು.

ಅಂದು ಮುಂಜಾನೆ ಮೊಮ್ಮಗಳನ್ನು ಎಬ್ಬಿಸಿ ಮನೆಯ ಕೆಳಮಹಡಿಗೆ ಕರೆದೊಯ್ದ ಅಜ್ಜಿ ಆಕೆ ಚಿಕ್ಕಂದಿನಲ್ಲಿ ಆಟವಾಡುತ್ತಿದ್ದ ಬೊಂಬೆಗಳನ್ನು ಹಳೆಯ ಶೋಕೇಸ್ ನಲ್ಲಿ ಸಾಲಾಗಿ ಜೋಡಿಸಿಟ್ಟಿದ್ದನ್ನು ತೋರಿಸಿದಾಗ ಸಮನ್ಯ ತಾನು ಅತಿಯಾಗಿ ಹಚ್ಚಿಕೊಂಡಿದ್ದ ಗೊಂಬೆಯೊಂದನ್ನು ಕೈಯಲ್ಲಿ ತೆಗೆದುಕೊಂಡು ಭಾವ ಪರವಶಳಾದಳು.

"ಪುಟ್ಟಿ, ನಿನಗೆ ನೆನಪಿದೆಯೇ? ಚಿಕ್ಕಂದಿನಲ್ಲಿ ನೀನು ಹೊಸ ಹೊಸ ಗೊಂಬೆಗಳನ್ನು ಖರೀದಿಸಿದಾಗಲೆಲ್ಲ ಹಳೆಯ ಗೊಂಬೆಗಳನ್ನು ಯಾರಿಗಾದರೂ ಕೊಟ್ಟು ಬಿಡುತ್ತಿದ್ದೆ" "ಓಹೋ.. ಚೆನ್ನಾಗಿ ನೆನಪಿದೆ ಅಜ್ಜಿ" ಎಂದು ಸಂತಸದಿಂದ ಹೇಳಿದಳು ಸಮನ್ಯ. "ಅದ್ಯಾಕೆ ಹಾಗೆ ಮಾಡ್ತಾ ಇದ್ದೆ ಪುಟ್ಟಿ" ಎಂದು ಕೇಳಿದ ಅಜ್ಜಿಗೆ ಸಮನ್ಯ " ಮತ್ತೆ ಹೊಸ ಬೊಂಬೆ ತೆಗೆದುಕೊಂಡಾಗ ಅವುಗಳನ್ನ ಇಡುವುದಕ್ಕೆ ಜಾಗ ಸಾಲದೆ ಹೋದ್ರೆ ಅಂತ ಹಳೆ ಬೊಂಬೆಗಳನ್ನ ಯಾರಿಗಾದ್ರೂ ಕೊಟ್ಟು ಜಾಗ ಮಾಡ್ತಾ ಇದ್ದೆ ಅಜ್ಜಿ ಅಂತ ಹೇಳಿದಳು.

ನಸು ನಗುತ್ತಾ ಅಜ್ಜಿ "ನಿಜ ಪುಟ್ಟಿ, ನಮ್ಮ ಬದುಕೂ ಅಷ್ಟೇ! ಚಿಕ್ಕಂದಿನ ಕೆಲ ಹಳೆಯ ವಸ್ತುಗಳನ್ನು, ಬಟ್ಟೆಗಳನ್ನು ಅವು ನಮಗೆ ಎಷ್ಟೇ ಇಷ್ಟವಾದರೂ ಬಳಸಲು ಸಾಧ್ಯವಿಲ್ಲ ಎಂದೆನಿಸಿದಾಗ ಅವುಗಳನ್ನು ಕೊಟ್ಟು ಬಿಡುವುದೇ ವಿಹಿತ. ಹಾಗೆಯೇ ಕೆಲ ಸ್ನೇಹಿತರನ್ನು ಕೂಡ ಕಾಲಕ್ರಮೇಣ ಮರೆತುಬಿಡುತ್ತೇವೆ. ಬದುಕಿನಲ್ಲಿ ನಮ್ಮ ಜೊತೆಗೆ ಅವರ ಋಣ ಎಷ್ಟಿರುತ್ತದೆಯೋ ಅಷ್ಟು ಕಾಲ ಅವರು ನಮ್ಮೊಂದಿಗೆ ಹೆಜ್ಜೆ ಹಾಕುತ್ತಾರೆ" ಎಂದು ಅರ್ಥಗರ್ಭಿತವಾಗಿ ಹೇಳಿ ಸುಮ್ಮನಾದರು.

ಅಜ್ಜಿಯ ಈ ಮಾತುಗಳು ಸಮನ್ಯಳ ಮನಸ್ಸಿನಲ್ಲಿ ಹೊಸ ಚಿಂತನೆಯನ್ನು ಹುಟ್ಟು ಹಾಕಿ ಹೌದಲ್ಲವೇ? ಪ್ರಸ್ತುತ ನನ್ನ ಪರಿಸ್ಥಿತಿಯೂ ಹಾಗೆಯೇ ಇದೆ. ಯಾರ್ಯಾರ ಋಣ ಎಷ್ಟು ಇರುತ್ತದೆಯೋ ಅಷ್ಟು ಮಾತ್ರ ಪಡೆಯಲು ಸಾಧ್ಯ... ರಾಜೇಶ್ ಮತ್ತು ಪ್ರೀತಿ ನನ್ನ ಸ್ನೇಹಿತರು ನಿಜ, ಅವರಿಬ್ಬರೊಂದಿಗೆ ನನಗಿರುವ ಸಂಬಂಧ ಸ್ನೇಹದ್ದು. ಆದರೆ ಅವರಿಬ್ಬರ ಸಂಬಂಧ ಪ್ರೇಮಿಗಳದ್ದು. ಈ ಸತ್ಯವನ್ನು ಅರಿಯದೆ ಹೋದನಲ್ಲ ಎಂದುಕೊಂಡಾಗ ಮನಕ್ಕೆ ಮುಸುಕಿದ ಮಬ್ಬು ಮುಂಜಾನೆಯ ಎಳೆ ಸೂರ್ಯನ ಬಿಸಿಲು ಹಾಕಿದ ಮಂಜಿನಂತೆ ಕರಗಿದರೆ.... ಒಳ ಕೋಣೆಯಲ್ಲಿ " ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ, ಕೈ ಹಿಡಿದು ನಡೆಸೆನ್ನನು " ಎಂಬ ಗೀತೆ ಅಜ್ಜಿಯ ಸುಶ್ರಾವ್ಯ ಕಂಠದಿಂದ ಹೊರ ಹೊಮ್ಮುತ್ತಿತ್ತು.

ಏನೂ ಕೇಳದೆಯೂ ಬೆಟ್ಟದಂತ ಸಮಸ್ಯೆಯನ್ನು ಹೊತ್ತು ಬಂದಿದ್ದ ತನ್ನ ನೋವನ್ನು ಕೇವಲ ತನ್ನ ಅನುಭವದಿಂದ ಬಗೆಹರಿಸಿದ ಅಜ್ಜಿಯ ಮೇಲೆ ಅಭಿಮಾನವುಕ್ಕಿ ಚಿಕ್ಕಂದಿನಲ್ಲಿ ಮಾಡುತ್ತಿದ್ದಂತೆ ಅವರ ಕುತ್ತಿಗೆಯ ಸುತ್ತ ಕೈ ಹಾಕಿ ತಬ್ಬಿಕೊಂಡು ಆಕೆಯ ಕೆನ್ನೆಯ ಮೇಲೆ ಮುತ್ತು ಕೊಟ್ಟ ಸಮನ್ಯಳ ಮುಖಭಾವವನ್ನು ನೋಡಿ ಅಜ್ಜಿ ಸಮಾಧಾನದಿಂದ ಆಕೆಯ ಕೆನ್ನೆ ಹಿಡಿದರು.

# ಮನ ಶುದ್ಧೀಕರಣ ಬದುಕೆಲ್ಲಾ ವೈಭವಪೂರ್ಣ

– ಡಾ. ರಾಜಶೇಖರ ಜಮದಂಡಿ



ಜಗತ್ತಿನ ಜೀವಿಗಳಲ್ಲಿ ಮನುಷ್ಯ ಅತ್ಯುತ್ತಮ ತಿಳಿವಳಿಕೆಯ ಪ್ರಾಣಿ. ವಿವೇಕ, ವಿಚಾರ, ವಿನೋಧವನ್ನೊಳಗೊಂಡಂತೆ ಸಂಸ್ಕೃತಿ–ಸಂಸ್ಕಾರವುಳ್ಳವನಾಗಿದ್ದಾನೆ. ಮಹಾತ್ಮರು ಹೇಳಿದಂತೆ 'ಮರ್ತ್ಯಲೋಕವೆನ್ನುವುದು ಕರ್ತಾರನ ಕಮ್ಮಟ' ವಾಗಿರುವುದರಿಂದ ಏನಾದರೊಂದು ಉಪಜೀವನಕ್ಕೆ ಸತ್ವಯುತ ಕಾಯಕದಲ್ಲಿ ನಿರತನಾಗಿರುವುದು. ಅದೇರೀತಿ ಮನುಷ್ಯನ ಶರೀರವು 'ಪ್ರಸಾದಕಾಯ'ವಾಗಿರುವುದರಿಂದ, ದುರಭ್ಯಾಸ–ದುರ್ವ್ಯಸನಗಳಿಂದ ಬಲಿಯಾಗಿಸದೇ ಮುಕ್ತವಾಗಿರಿಸಿ ಶಿಸ್ತು, ಶುದ್ಧ, ಶ್ರೇಷ್ಠ ಮತ್ತು ಶಾಂತವಾಗಿಟ್ಟುಕೊಳ್ಳುವುದು. ಉತ್ತಮ ಆಲೋಚನೆಗಳಿಗೆ ಮನಸ್ಸನ್ನು ಸಿದ್ಧಗೊಳಿಸಿಕೊಂಡು ಪ್ರೀತಿ, ವಾತ್ಸಲ್ಯ, ಸ್ನೇಹ, ಸೌಹಾರ್ದ, ಭ್ರಾತೃತ್ವ, ಬಂಧುತ್ವ, ಸತ್ಯ, ಪ್ರಾಮಾಣಿಕತೆ, ತ್ಯಾಗ ಇತ್ಯಾದಿ ಗುಣಗಳನ್ನು ಬೆಳೆಸಿಕೊಳ್ಳುವುದು.

"ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ, ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ, ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ, ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು" ಎಂದು ಬಸವಣ್ಣನವರು ಹೇಳಿದಂತೆ ಮನಸ್ಸೆಂಬುದು ಮಾಂಸದ ಮುದ್ದೆ. ಅದನ್ನು ಯಾವ ರೀತಿಯಾದರೂ ಆಕಾರಗೊಳಿಸಬಹುದು. ಹಾಗೆಯೇ ಮನವೆಂಬುದು ರಬ್ಬರ್ ಇದ್ದಹಾಗೆ, ಎಳೆದಷ್ಟೂ ಹರಿದು ಹೋಗುತ್ತದೆ. ಇನ್ನೂ ಬೇಕು ಬೇಕು ಎಂದು ಹಣ, ಅಧಿಕಾರಕ್ಕೆ, ಕೀರ್ತಿಗೆ ಬೆನ್ನು ಹತ್ತಿದರೆ ಇರುವ ನೆಮ್ಮದಿಯ ಮನಕ್ಕೆ ತೊಂದರೆ.

ಮನ ಶುದ್ಧೀಕರಣಕ್ಕೆ ಅತಿಯಾಸೆಗಳು ಅಡ್ಡಿ–ಅಪಾಯ ಕೂಡ. ತಿಳಿನೀರಿನಂತೆ ಮನ ಕಾಪಾಡಕೊಳ್ಳಬೇಕೇ ಹೊರತು ಕಲಕಿದಾಗ ಅದು ಕೆಸರುಮಯವಾಗುತ್ತದೆ. ಮತ್ತೆ ತಿಳಿಗೊಳಿಸಬೇಕಾದರೆ ಬಹಳ ಸಮಯ ಬೇಕು. ಮನ ನಿಗ್ರಹಿಸದೇ ಯಾವ ವ್ರತ ಮಾಡಿದರೇನು? ಎಷ್ಟು ಲಕ್ಷ ಹೂಪತ್ರೆಗಳಿಂದ ಪೂಜೆಮಾಡಿ ಏನು ಫಲ? ಮನಸ್ಸು ಸುಧಾರಿಸದೇ ಮನುಷ್ಯ ಸುಧಾರಿಸಲಾರ. ಮನದಲ್ಲಿ ದೃಢತೆ–ನಿಷ್ಠೆ



ಇಲ್ಲದಿರೆ ದೇವರ ಮುಂದಿರುವ ನೈವೇದ್ಯ ಕಾಯಲೂ ಕಷ್ಟವಾಗುತ್ತದೆ. ಮಾಲಿನ್ಯದ ಮನಕ್ಕೆ ಆಧ್ಯಾತ್ಮದ ವಿಚಾರ ಪ್ರಯೋಜನವಾಗುವುದಿಲ್ಲ. ದ್ವಂದ್ವ ಭಾವನೆಗಳಿಂದ ಹೊರಬಂದಾಗ ಮಾತ್ರ ಮಾಡುವ ನೀಡುವ ಚಟುವಟಿಕೆಗಳೆಲ್ಲಾ ಪವಿತ್ರವಾಗಿರುತ್ತವೆ.

ಮನಸ್ಸು ಎಲ್ಲಾ ಜಂಜಾಟಗಳಿಂದ ಮುಕ್ತವಾಗಿರಬೇಕಾದರೆ ನಿತ್ಯ ಬೆಳಿಗ್ಗೆ ವಾಯುವಿಹಾರ, ಶರೀರಕ್ಕೆ ತಕ್ಕಷ್ಟು ವ್ಯಾಯಮ, ಪಾಲಿಗೆ ಬಂದ ಕಾಯಕದಲ್ಲಿ ನಿಷ್ಠೆ, ಹಿತಮಿತವಾದ ಆಹಾರ, ಭಗವಂತನ ಧ್ಯಾನದೊಂದಿಗೆ ರಾತ್ರಿ ನಿರಾತಂಕವಾದ ನಿದ್ದೆ, ಸಮಯ ದೊರೆತಾಗ ಉತ್ತಮ ಪುಸ್ತಕಗಳ ಅಧ್ಯಯನ, ದೊರಕುವ ಅಲ್ಪ ಸಂಪತ್ತಿನಿಂದ ಅಚ್ಚುಕಟ್ಟಾದ ಜೀವನಪ್ರೀತಿ ಗಳಿಸಿಕೊಂಡರೆ ಇದರಾಚೆಗೆ ಏನೂ ಬೇಕಾಗುವುದಿಲ್ಲ. ಆಗ ಮನಸ್ಸು ಶುದ್ಧತೆಯಲ್ಲಿ ಮಿಂದೇಳುತ್ತದೆ. ನಮ್ಮ ಬದುಕು ವಿಷಯ ವಾಸನೆಯಿಂದ ಮುಕ್ತವಾಗಿ ಸೌಂದರ್ಯದಿಂದ ಕಂಗೊಳಿಸುತ್ತದೆ ಮತ್ತು ವೈಭವಪೂರ್ಣವಾಗಿರುತ್ತದೆ.

# ಬಣ್ಣದ ಬದುಕಿನ ಯಾತ್ರೆ

ಈ ಬದುಕಿನಲ್ಲಿ ನೋವು ನಲಿವು ಸಹಜ ಆದರೆ ಎರಡನ್ನೂ ಒಂದೇ ದೃಷ್ಟಿಯಲ್ಲಿ ನೋಡುವ ಮನಸ್ಸುಗಳು ವಿರಳ. ನಮ್ಮ ಆಲೋಚನೆಯ ವಿಧಾನದಿಂದ ಸದಾ ಯೋಚನೆಯಲ್ಲೇ ಹಲುಬುತಿ ರುತ್ತೇವೆ. ಮುಂದೆ ಹೀಗಾಗಬಹುದು ಹಾಗಾಗಬಹುದೆಂಬ ತರ್ಕದೊಳಗೆ ಮುಳುಗಿ ಬದುಕಿನ ಬಣ್ಣವ ಮಂದಗೊಳಿಸುತ್ತೇವೆ. ಕತ್ತಲಿನ ತಿರುವುಗಳಲ್ಲಿ ಹೆದರಿ ಹೆಜ್ಜೆ ಹಾಕಲು ಹಿಂಜರಿಯುವಾಗ ಬದುಕು ನಮಗಾಗಿ ಹೊಳೆವ ತಾರಾಪಲ್ಲಕ್ಕಿಯ ಸಿದ್ಧ ಮಾಡಿರುತ್ತದೆ ಎಂಬುದ ಮರೆಯಬಾರದು. ಗರ್ಭದಿ ಉದಯಿಸಿ ಮಣ್ಣಲ್ಲಿ ಅಸ್ತಮಿಸುವ ಜೀವನ ಕ್ಕೊಂದು ನಿರ್ದಿಷ್ಟ ಅರ್ಥವಿಲ್ಲ; ನಮ್ಮ ಅನುಭವ ಗಳಿಗನುಸಾರ ಜೀವನವ ಅರ್ಥೈಸಿಕೊಳ್ಳುವ ಹಕ್ಕು ಭಗವಂತ ನಮ್ಮೆಲ್ಲರಿಗೂ ಒದಗಿಸಿರುತ್ತಾನೆ. ಬದುಕಿನ ಪಯಣದ ರಹಸ್ಯವ ಅರಿತು ಒಪ್ಪಿಕೊಳ್ಳುವ ಅವಕಾಶ ಅದೆಂದು ನಮ್ಮ ಕೈಜಾರಿ ಹೋಗದಿರಲಿ. ಪಾಠ ಕಲಿಸುವ ಬದುಕಿನ ಉದ್ದೇಶ ಎಲ್ಲ ಮಟ್ಟದಲ್ಲು ವಿವಿಧವಾಗಿರುತ್ತದೆ ಆದರೆ ಖಂಡಿತವಾಗಿಯು ಪರಸ್ಪರ ಸಂಬಂಧದಲ್ಲಿರುತ್ತದೆ.



ಬದುಕ ಬದುಕವದಕ್ಕು ಬದುಕಿಗೆ ಬದುಕಲು ಕಲಿಸಲು ಬೀಡುವದಕ್ಕು ವ್ಯತ್ಯಾಸವಿದೆ. ಜೀವನ ನಿಯಮಗಳ ಚೌಕಟ್ಟಿನ ಸಾರಾಂಶವಿಲ್ಲ, ಬಂದದ್ದೆಲ್ಲವ ನಗುತ್ತಾ ಸ್ವೀಕರಿಸಿ ಅದರೊಳಗಿನ ಒಳಾರ್ಥವ ಅರಿತು ಹೆಜ್ಜೆ ಹಾಕುವ ನಿತ್ಯೋತ್ಸವದ ಹೆಸರೇ ಜೀವನ. ನಮ್ಮೆಲ್ಲರೊಳಗೊಂದು ಅಂತರಾಳವಿದೆ; ಕೆಲವೊಮ್ಮೆ ಅದು ಭಾರವಾಗಬಹುದು ಮತ್ತೊಮ್ಮೆ ದುಃಖ ಭರಿತವಾಗಬಹುದು, ಹಾಗೆಯೇ ಸುಖಾಸುಮ್ಮನೆ ಕೊರಗುವ ಯಂತ್ರವು ಆಗಬಹುದು. ಕಳೆದ ಸಮಯಗಳು ಮತ್ತೆ ಕೈ ಸೇರೋದಿಲ್ಲ. ಭವಿಷ್ಯದ ಒಳಿತ ಅರಸಲು ಹೋಗಿ ವರ್ತಮಾನದ ಸೌಂದರ್ಯವ ಕಳೆದುಕೊಳ್ಳುವುದು ಅದೆಷ್ಟು ಸರಿ !? ಕೆಲವರಿಗೆ ಬದುಕು ದುಡ್ಡು, ಹೆಸರು ಗಳಿಸುವ ದಿನಚರ್ಯ ವಾಗಿರಬಹುದು ಮತ್ತೆ ಕೆಲವರಿಗೆ ಹಸಿದ ಹೊಟ್ಟೆಯ ತುಂಬಿಸುವ ಅವಶ್ಯಕತೆಯಾಗಿರಬಹುದು ಇನ್ನು ಕೆಲವರಿಗೆ ಕಳೆಯುವ ಕ್ಷಣಗಳ ಎಣಿಸಿಕೊಳ್ಳುವ ಉತ್ಸವವಾಗಿರಬಹುದು. ಈದೆಲ್ಲವುದರಲ್ಲಿ ಯಾವುದು ನಮ್ಮದೆನ್ನುವ ಪ್ರಶ್ನೆಗೆ ಉತ್ತರ ನಾವೇ ಕಂಡುಕೊಳ್ಳಬೇಕು. ಎಲ್ಲವನಿತ್ತರು ಈ ಜೀವಿಗೆ ಸಂತುಷ್ಟತೆವಿಲ್ಲವೆಂದು ಜೀವನಕ್ಕೂ ಬೇಸರವಾಗಬಹುದೇನೋ!?. ಇಲ್ಲದಿರುವದ ಬಯಸಿ ಅದು ಪಡೆಯುವ ಹೊತ್ತಿಗೆ ಮತ್ತೊಂದು.... ಹೀಗೆ ಈ ಇಚ್ಛೆಯ ಸರದಿ ಕಡಿತಗೊಳ್ಳುವುದು ಅಸಾಧ್ಯವೇ ಸರಿ. ಬದುಕು ತಾಳ್ಮೆಯ ತಪ ಅಂತೆಯೇ ತಟ್ ಅಂತ ಮುಕ್ತಾಯವಾಗುವ ಸಮಯದ ಛಾಯೆ. ಉರುಳಿ ಹೋಗುವ ಮುನ್ನ ಕಣ್ತುಂಬುವ ಬಣ್ಣಗಳಿಂದ ಬದುಕ ಜೀವಿಸಿಬಿಡೋಣ.

– ಲಕ್ಷ್ಮೀ ರವೀಂದ್ರನಾಥ ಮಂಡ್ಯ

ಕವಿ ಮನಸು

## ನಯನ ಮನೋಹರಿ ತುಂಗಭದ್ರೆ



ಅದು ಎಂತಹ ಅಬ್ಬರವು
ತಾಯಿ ನಿನ್ನದು
ಭೋರ್ಗರೆತದ ಸದ್ದಿನಲಿ
ನೀನು ಹರಿಯೋದು

ಅಬ್ಬರದ ಅಲೆಗಳ ಕಾಣುವ
ನಯನಕೆ ರೋಮಾಂಚನವು
ರೌದ್ರ ನರ್ತನ ಮಾಡುತ ಹೊರಟಿಹ
ತಾಯಿ ತುಂಗಭದ್ರೇಯು

ಪಡುವಣ ದಿಕ್ಕಲಿ ನಿನ್ನ ಉಗಮವು
ಮೂಡಣ ಕಡೆಗೆ ನಿನ್ನ ಗಮನವು
ತುಂಗಭದ್ರೆ ತಾಯಿಯಮ್ಮನ
ನೋಡೋದೇ ಭಾರಿ ಸಂಭ್ರಮವು

ಎತ್ತ ನೋಡಿದರತ್ತ ಕಾಣುವೆ
ಕರುನಾಡ ಕಣ್ಮಣಿ
ಎರಡು ರಾಜ್ಯದ ಅನ್ನದಾತೆ
ತುಂಗಭದ್ರೆ ತಾಯಿಯೇ

ಮಲ್ಲಾಪುರ ಮುನಿರಾಬಾದನಲ್ಲಿ
ನಿನ್ನಯ ದಿಗ್ಬಂಧನವು
ಬಂಧಿಸಿದರೂ ಬಿಡಿಸಿಕೊಂಡೆಯ
ತುಂಬಿಸಿ ನಿನ್ನೊಡಲು

ಆಣೆಕಟ್ಟಿಗೆ ಮೂವತ್ತು ಮೂರು ಗೇಟು
ಹೋಗುವೆ ಆಂಧ್ರಕೆ ದಾಟು
ಎರಡೂ ರಾಜ್ಯಕೂ ಜೀವವ ನೀಡಿ
ಆಗಿರುವೆ ನೀ ಜೀವನಾಡಿ

ಪಂಪಾಂಬಿಕೆ ವಿರೂಪಾಕ್ಷನ ಪೂಜೆಗೆ
ನಿನ್ನಯ ಮಡಿ ನೀರು
ಸುಂದರ ಪುರಂದರ ಮಂಟಪದೊಳಗೆ
ಪಾದ ತೊಳೆಯಲು ಸೇರು

ಮಂತ್ರಾಲಯಕೆ ಪಯಣ ಮಾಡುತ
ತಂಗಿ ಮಂಚಾಲಮ್ಮನ ಕಂಡಳು
ಅಣ್ಣ ರಾಘವೇಂದ್ರನ ದರುಶನ ಮಾಡಿ
ಶುಭಆಶೀರ್ವಾದವ ಪಡೆದಳು

ಕರ್ನೂಲು ಸಮೀಪ ಕೃಷ್ಣೆಯೊಡಗೂಡಿ
ಸಂಗಮದಲ್ಲಿ ಸಂಗಮ ಆಗ್ಯಾಳ
ಮುಂದಕೆ ಸಾಗಿ ಶ್ರೀಶೈಲ ಸೇರಿ ಪಾತಾಳ
ಗಂಗೆ ಆಗ್ಯಾಳ

– ಕೆ ಎಂ ಬಸವರಾಜ ಹೊಸಪೇಟೆ

## ಬಾನಲ್ಲಿ ಓಡು ಮೇಘ

ಬಾನಲ್ಲಿ ಓಡೋ ಮೇಘ
ನೋಡಲು ಎಂಥಾ ವೈಭೋಗ
ಕಳುಹಿಸಿರುವೆ ನಲ್ಲನಿಗೆ ಪ್ರೇಮ ಸಂದೇಶ
ಕಣ್ಣಂಚಲಿ ಮಿಂಚಾಗಿ ಮಿನುಗಿದೆ ಹರುಷ

ನೀಲಾಗಸದಿ ಮೇಘಗಳ ಚಿತ್ತಾರ
ಕ್ಷಣಕ್ಷಣವೂ ಬಾನಿಗೆ ಅಲಂಕಾರ
ಕಪ್ಪು ಬಿಳುಪು ಬಣ್ಣದಿ
ಮನ ಸೆಳೆಯುವುದು ಚಂದದಿ

ನೀರು ಆವಿಯಾಗಿ ಮೋಡವಾಗುವುದು
ಭೂಮಿ ಬಾನಿಗೆ ಸೇತುವೆ ಬೆಸೆಯುವುದು
ಓಡುವ ಮೋಡವ ನೋಡಿ
ಪ್ರಕೃತಿಯು ಮಾಡಿದೆ ಮೋಡಿ

– ಚೇತನ ಭಾರ್ಗವ ಬೆಂಗಳೂರು

## ಸುತ್ತ ಮುತ್ತ
### ಕುಂದು-ಕೊರತೆ

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ?

ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು ಹಂಪಿ ಟೈಮ್ಸ್ ದಿನಪತ್ರಿಕೆ 9448633038 ವಾಟ್ಸಪ್ ನಂಬರ್ ಗೆ ಕಳುಹಿಸಿ.

# ಯಹಾ ಥಾ ಮೇಪ್ಪಾಡಿ...!



■ **ನಂದಿನಿ ಸನಬಾಲ್ ಗುಲ್ಬರ್ಗಾ**

NDF ತಂಡ, ಸ್ವಯಂ ಸೇವಾ ತಂಡಗಳು ಒಂದು ಕ್ಷಣ ವಿಚಲಿತಾರಾದರು, ಆಸ್ಪತ್ರೆಗಳಲ್ಲಿ ದ ಹೆಣದ ರಾಶಿ, ಯಾರದು ಮಗು? ಯಾರದು ಅಮ್ಮ? ಯಾರದು ಅಪ್ಪ? ಈ ಶವಗಳನ್ನು ಯಾರಿಗೆ ಹಸ್ತಾಂತರಿಸುವುದು? ಇವರನ್ನು ಯಾರು ಗುರುತ್ತಿಸುತ್ತಾರೆ? ಹೀಗೆ ಯೋಚಿಸುವಂತಾಗಿದೆ, ಪ್ರಕೃತಿಯ ಮುನಿಸು ನೋಡಿ ಅದೆಷ್ಟು ಇರಬಹುದು, ಕುಳಿತ ಸ್ಥಿತಿಯಲ್ಲಿ, ನಿಂತ ಸ್ಥಿತಿಯಲ್ಲಿ, ಮಂಚದ ಮೇಲೆ ಮಲಗಿದ ಸ್ಥಿತಿಯಲ್ಲಿ ಶವಗಳು, ಶವಗಳನ್ನು ನೋಡಿ ನಿಬ್ಬೆರಾಗಾಗುವುದು, ಇನ್ನೊಂದು ಕಡೆ ತೇಲಿ ಬರುತ್ತೀರುವ ಶವಗಳರಾಶಿ, ಎಲೆಂದರಲ್ಲಿ, ಮನುಷ್ಯ, ಪ್ರಾಣಿ ಪಕ್ಷಿಗಳ ದೇಹದ ಭಾಗಗಳು, ಇನ್ನು ದುರಂತ ಅಂದರೆ ಸಾಮೂಹಿಕ ಶವ ಸಂಸ್ಕಾರಕ್ಕೂ ಮಳೆ ಅಡ್ಡಿಯಾಗಿದ್ದು, ಒಣಗಿದ ಕಟ್ಟಿಗೆ ಸಿಗದೆ ಗ್ಯಾಸ್ ಬರ್ನರ್ ನಿಂದ ಸುಟ್ಟು ಶವಸಂಸ್ಕಾರ ಮಾಡುವಾಗ, ಗುಂಡಿಗೆ ಎದೆಯ ಯೋಧರುರು ಕೂಡ ಮಕ್ಕಳ ಶವ ಕಂಡು ವಿಚಲಿತರಾದರೂ. ಎಲ್ಲವೂ ಕ್ಷಣದಲ್ಲಿ ಮಾಯೆ, ಇಡಿ ವಯನಾಡನ್ನು ನರಕವನ್ನನ್ನಾಗಿ ಮಾಡಿದ ಬೆಟ್ಟಗಳ ಕುಸಿತ...ಎಲ್ಲಿ ನೋಡಿದರಲ್ಲಿ ಹೆಣಗಳ ರಾಶಿ ಸಾವಿನ ಲೆಕ್ಕ ಸಿಗುತ್ತಿಲ್ಲ. 29 ಜುಲೈ 2024 ಮಧ್ಯರಾತ್ರಿ ಬೆಟ್ಟ ಕುಸಿತ, ಚೆಮ್ಬುರ್ ನದಿಯ ದಿಕ್ಕನ್ನೆ ಬದಲಾಯಿಸಿತು, ದಿಕ್ಕನ್ನು ಬದಲಾಯಿಸಿದ ನದಿಯು ಕನಿಕರ ತೋರದೆ ತಂನ್ನೊಂದಿಗೆ ಎಲ್ಲವನ್ನು ಹೊಡೆದು ಕೊಂಡು ಹೋಗುತ್ತಿರುವ ನರಕ ದೃಶ್ಯ... ಅಬ್ಬಾ ಮನುಷ್ಯ ಪ್ರಕೃತಿಯನ್ನು ತನ್ನ ಮನಬಂದಂತ್ತೆ ಬಳಸಿ, ಹಾಳುಮಾಡಿದ್ದಕ್ಕೆ ಈ ಶತಮಾನದಲ್ಲಿ ಕಂಡು ಕೇಳರಿಯದ ಪ್ರಕೃತಿ ವಿಕೋಪನ್ನು ಎದುರಿಸುತ್ತಿದ್ದೇವೆ. ಮುಂಡಕ್ಕಿ ಈ ಹಿಂದೆಯೂ 1984 ರ ಜುಲೈ 1 ರಂದು ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಸರ್ವನಾಶ ಆಗಿತ್ತು, ಮತ್ತೆ ಅದೇ ನಾಶ 40 ವರ್ಷಗಳ ಬಳಿಕ ಇದೆ ಜುಲೈ ತಿಂಗಳಲ್ಲಿ ನಡೆಯಿತು. ಕೇರಳ ಭೋಗೋಳಿಕವಾಗಿ ತುಂಬಾ ಸೂಕ್ಷ್ಮ ಪ್ರದೇಶವಾಗಿದೆ, ಹಿಮಾಲಯದ ನಂತರ ಅತಿ ಎತ್ತರವಾದ ಬೆಟ್ಟ ಗುಡ್ಡ, ನದಿ ಜಲಪಾತಗಳನ್ನು ಹೊಂದಿದ್ದು, ವರ್ಷದ ಮೊದಲ ಮಾನ್ಸೂನ್ ಕೇರಳದಲ್ಲಿ ಬರುತ್ತದೆ, ಮಾನ್ಸೂನ್ ಬಂದ ನಂತರ ಹಲವು ದಿನಗಳವರೆಗೂ ಹಿಗೆಯೇ ಮಳೆ ಸುರಿಯುತ್ತದೆ, ಹೀಗಾಗಿ ಬೆಟ್ಟ ಗುಡ್ಡಗಳು ನೆನೆದು ಅವಾಗವಾಗ ಅನಾಹುತಗಳು ಸಂಭವಿಸುತ್ತವೆ. ಇನ್ನೊಂದು ದುರಂತ ಅಂದರೆ ಪ್ರವಾಹಕ್ಕೆ ಕಾರಣ ಮಳೆ ಅಲ್ಲ, ಮನುಷ್ಯನ ಅತೀ ಆಸೆ, ಭೂಮಿಯ ಪರಿಸರ ತನಿಷ್ಟ ಬಂದಂತೆ ಬಳಸಿಕೊಂಡು, ನಗರೀಕರಣ, ಹೆಚ್ಚುತ್ತಿರುವ ಕೈಗಾರಿಕೆಗಳು, ರಸ್ತೆ ಅಗಲಿಕರಣ, ಕಾಡಿನನಾಶ ಹೀಗೆ ಪ್ರಕೃತಿಯ ಸಮತೋಲನವನ್ನು ಏರುಪೇರಾಗುವಂತೆ ಮಾಡಿ, ಪರಿಸರದ ಸ್ಥಿತಿ ಅಳೋಲ್ಲ ಕಲ್ಲೋಲ್ಲ ವಾಗಿದೆ. ಪ್ರಕೃತಿ ವಿಕೋಪಕ್ಕೆ ಒಳಗಾದ ಪ್ರದೇಶ ಗಳ್ಳಲ್ಲಿ ಸೇವೆ ಮಾಡುತ್ತಿರುವ ವೀರ ಯೋಧರು, NDF ತಂಡ, ಲೋಕಲ್ ಪೊಲೀಸ್, ಅರಣ್ಯ ಸಿಬ್ಬಂದಿಗಳು, ಸ್ಥಳೀಯ ಅಧಿಕಾರಿಗಳು ಹಾಗೂ ಸೇವೆ ಮಾಡುತ್ತಿರುವ ಸಂಘ ಸಂಸ್ಥೆಗಳಿಗೆ ದೇವರು ಬಲ, ಶಕ್ತಿ ಹಾಗೂ ಆಶೀರ್ವಾದ ನೀಡಲಿ, ಕೇರಳದ ಜನರಿಗೆ ಆ ದೇವರು ಧೈರ್ಯತುಂಬಲಿ ಹಾಗೂ ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥನೆ.



# ತಾಯಿಯ ಎದೆ ಹಾಲು ಮಕ್ಕಳಿಗೆ ಅಮೃತ
## ಪಪಂ ಸದಸ್ಯೆ ಲಕ್ಷ್ಮಿ ಬಸವರಾಜ್ ಹೇಳಿಕೆ | ಮಕ್ಕಳಿಗೆ ಸ್ತನ್ಯ ಪಾನ ಮಾಡಿಸಿ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಸ್ತನ್ಯಪಾನ ಎಂಬುದು ಆಯ್ಕೆ ಅಲ್ಲ ನಮ್ಮ ಬದ್ಧತೆಯಾಗಿರಬೇಕು ಹಾಗೇ ಎಲ್ಲರಿಗೂ ಸ್ತನ್ಯಪಾನದ ಅರಿವು ಮೂಡಿಸುವ ಕಾರ್ಯ ಆಗಬೇಕು ಎಂದು ಪಪಂ ಸದಸ್ಯೆ ಲಕ್ಷ್ಮಿ ಬಸವರಾಜ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಐಸಿಟಿಸಿ ವಿಭಾಗದಲ್ಲಿ ಗುರುವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಜಯನಗರ, ತಾಲೂಕು ಆರೋಗ್ಯ ಇಲಾಖೆ, ತಾಲೂಕು ಸಾರ್ವಜನಿಕ ಆಸ್ಪತ್ರೆ ಕೂಡ್ಲಿಗಿ ಸಂಯುಕ್ತಶ್ರಯ ದಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹಕ್ಕೆ ಚಾಲನೆ ನೀಡಿ ಮಾತನಾಡಿದರು. ಆರೋಗ್ಯ ಇಲಾಖೆಯವರು ಏರ್ಪಡಿಸುವಂತಹ ಇಂತಹ ಮಹತ್ವದ ಕಾರ್ಯಕ್ರಮ ಗಳನ್ನು ಎಲ್ಲರೂ ಸದ್ಬಳಕೆ ಮಾಡಿಕೊಳ್ಳಬೇಕು ಹಾಗೆಯೇ ತಾಯಿಯ ಎದೆ ಹಾಲಿನ ಮಹತ್ವವನ್ನು ಅರಿತು ತಾಯಂದಿರು ಮಕ್ಕಳಿಗೆ ಸ್ತನ್ಯ ಪಾನನವನ್ನು ಮಾಡಿಸಬೇಕು ಎಂದು ಕರೆ ನೀಡಿದರು.

ಮಕ್ಕಳ ತಜ್ಞ ಡಾ.ನಿರಂಜನ ಮಾತನಾಡಿ, ಮಗುವಿಗೆ ಮೊದಲ ವೈದ್ಯೆ ತಾಯಿ. ಮಗು ಜನಿಸಿದ ಒಂದು ಗಂಟೆಯೊಳಗೆ ತಾಯಿಯ ಎದೆ ಹಾಲು ಕುಡಿಸಬೇಕು ಮಗುವಿಗೆ ಆರು ತಿಂಗಳವರೆಗೂ ತಾಯಿಯ ಎದೆ ಹಾಲನ್ನು ಮಾತ್ರ ಕುಡಿಸಬೇಕು ಮಗುವಿಗೆ ಆರು ತಿಂಗಳ ನಂತರ ದ್ರವ ಪೌಷ್ಟಿಕ ಆಹಾರವನ್ನು ತಿನ್ನಿಸಬೇಕು. ತಾಯಿಯು ಸಹ ಗರ್ಭವತಿಯಿಂದಲೇ ಹೆಚ್ಚಾಗಿ ಪೌಷ್ಟಿಕ ಆಹಾರಗಳನ್ನು ದಿನನಿತ್ಯ ಆಹಾರದಲ್ಲಿ ಸೇವಿಸಬೇಕಾಗಿರುತ್ತದೆ, ಸ್ಥಳೀಯವಾಗಿ ಸಿಗುವಂತಹ ಹಸಿರು ತರಕಾರಿ, ಸೊಪ್ಪುಗಳು, ಧಾನ್ಯಗಳು ಮತ್ತು ಮೊಟ್ಟೆ ಇವುಗಳೆಲ್ಲವನ್ನು ದಿನನಿತ್ಯ ಆಹಾರದಲ್ಲಿ ಇರಬೇಕಾಗಿರುತ್ತದೆ. ಇದರಿಂದ ಸಹಜವಾಗಿ ಮಗು ಆರೋಗ್ಯ ವಾಗಿರಲು ಸಾಧ್ಯವಾಗುತ್ತದೆ. ಅದರಂತೆ ಪ್ರಸವದ ನಂತರ ಮಗುವಿಗೆ ತಾಯಿಯ ಎದೆ ಹಾಲು ಎಂಬುದು ಪ್ರಕೃತಿಯ ಮೊದಲ ಅಮೃತ. ಆದ್ದರಿಂದ ಎಲ್ಲಾ ತಾಯಂದಿರುಗಳು ಸದೃಡ ಆರೋಗ್ಯವನ್ನು ತಾವು ಕಾಪಾಡಿಕೊಂಡು ನಂತರ ಮಗುವಿಗೆ ಸ್ತನ್ಯಪಾನ ಮಾಡಿಸಿ ಸದೃಡ ಆರೋಗ್ಯ ಕಾಪಾಡಿಕೊಳ್ಳಲು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸ್ತನ್ಯಪಾನ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಕೆ. ಸುನಿತಾ ಹಾಗೂ ಆರ್ ಕೆ ಎಸ್ ಕೆ ಆಪ್ತ ಸಮಲೋಚಕ ಓಬಣ್ಣ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ತಾಯಂದಿರು ಮಹಿಳೆಯರು ಭಾಗಿಯಾಗಿದ್ದರು. ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಮಧು, ಐಸಿಟಿಸಿ ಆಪ್ತ ಸಹಾಯಕ ಕೆ.ಪ್ರಶಾಂತ ಕುಮಾರ್, ಆಸ್ಪತ್ರೆಯ ಸಿಬ್ಬಂದಿಗಳಾದ ನಾಗರತ್ನ, ಗಂಗಮ್ಮ, ಸೋಮಶೇಖರ್, ಗಂಗಮ್ಮ, ವೇದಾವತಿ, ಗುರು ಬಸವರಾಜ ಇದ್ದರು.

# ನಾಡಿಗೆ ಕನ್ನಡ ವಿವಿ ವಿದ್ವಾಂಸರ ಕೊಡುಗೆ ಅಪಾರ
## ಕನ್ನಡ ವಿವಿ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಹೇಳಿಕೆ | ವಿದ್ವಾಂಸರ ಬೀಳ್ಕೊಡುಗೆ

■ **ಹಂಪಿ ಟೈಮ್ಸ್ ಹೊಸಪೇಟೆ**

ನಾಡಿನ ಬಹುತ್ವದ ನೆಲೆಯಲ್ಲಿ ರೂಪುಗೊಂಡಿರುವ ಕನ್ನಡ ವಿಶ್ವವಿದ್ಯಾಲಯವು ಕನ್ನಡ ಸಾಹಿತ್ಯ ಭಂಡಾರ, ವಚನ ಸಾಹಿತ್ಯ, ಕನ್ನಡ ಭಾಷಾ ಅಭಿವೃದ್ಧಿ ಹಾಗೂ ಅಲೆಮಾರಿ ಬುಡಕಟ್ಟು ಸಮುದಾಯಗಳನ್ನು ಮುಖ್ಯವಾಹಿನಿಗೆ ಪರಿಚಯಿಸುವಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರ ಕೊಡುಗೆ ಶ್ಲಾಘನೀಯವಾದ್ದು ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಭುವನವಿಜಯ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪ್ರಾಧ್ಯಾಪಕರಾದ ಡಾ. ಕೆ.ಎಂ. ಮೇತ್ರಿ, ಡಾ. ಡಿ. ಪಾಂಡುರಂಗಬಾಬು ಹಾಗೂ ಡಾ. ಕೆ. ರವೀಂದ್ರನಾಥ ಅವರ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೃತ್ತಿ ಮತ್ತು ಪ್ರವೃತ್ತಿ ಎರಡನ್ನು ಸಂಶೋಧನೆಯನ್ನಾಗಿಸಿಕೊಂಡು, ನಾಡಿಗೆ ತಮ್ಮದೆಯಾದ ಕೊಡುಗೆ ನೀಡಿದ್ದಾರೆ. ಇನ್ನು ಕನ್ನಡ ವಿಶ್ವವಿದ್ಯಾಲಯವು ಸರ್ವರಿಗೂ



ಮುಕ್ತವಾಗಿದ್ದು, ನಿವೃತ್ತ ಪ್ರಾಧ್ಯಾಪಕರು ಹಾಗೂ ನೌಕರರ ಸೇವೆಗಾಗಿ ಕನ್ನಡ ವಿಶ್ವವಿದ್ಯಾಲಯವು ಸದಾ ತೆರೆದಿರುತ್ತದೆಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ. ವಿಜಯ್ ಪೂಣಚ್ಚ ತಂಬಂಡ, ಭಾಷಾ ನಿಕಾಯದ ಡೀನರಾದ ಡಾ. ಎಫ್.ಟಿ. ಹಳ್ಳಿಕೇರಿ, ಸಮಾಜ ವಿಜ್ಞಾನಗಳ ನಿಕಾಯದ ಡೀನರಾದ ಡಾ.ಚಲುವರಾಜು, ವಿವಿಧ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಆಡಳಿತ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಉಪಕುಲಸಚಿವ ಡಾ. ಎ. ವೆಂಕಟೇಶ ಗಣ್ಯರನ್ನು ಸ್ವಾಗತಿಸಿದರು, ಸಹಾಯಕ ಕುಲಸಚಿವ ರಾದ ಗುರುಬಸಪ್ಪ ವಂದಿಸಿದರು, ಅಧ್ಯಾಪಕರಾದ ಜ್ಯೋತಿ ಅವರು ನಿರೂಪಿಸಿದರು.

# ಕಂಬೈನ್ಡ್ ಹಾರ್ವೆಸ್ಟರ್ ಹಬ್ ಸ್ಥಾಪನೆಗಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ 2024-25ನೇ ಸಾಲಿನಲ್ಲಿ ಸಂಘ-ಸಂಸ್ಥೆಗಳಿಗೆ ಹಾಗೂ ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ತಲಾ ಒಂದು ಘಟಕ ಸ್ಥಾಪನೆಯ ಗುರಿ ಹಂಚಿಕೆಯಾಗಿದೆ. ಸಂಘ-ಸಂಸ್ಥೆಗಳು ಮತ್ತು ಪರಿಶಿಷ್ಟ ಪಂಗಡದ ರೈತರಿಂದ ಕಂಬೈನ್ಡ್ ಹಾರ್ವೆಸ್ಟರ್ ಹಬ್ ಸ್ಥಾಪನೆಗಾಗಿ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತರು ಅರ್ಜಿ ಯನ್ನು ಆಗಸ್ಟ್ 15ರೊಳಗೆ ಸಂಬಂಧಿಸಿದ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಸಲ್ಲಿಸಬಹುದು.

ಈ ಯೋಜನೆಯಲ್ಲಿ ರೈತರು ಯಂತ್ರಗಳನ್ನು ಬಾಡಿಗೆಗೆ ನೀಡುವ ಮೂಲಕ ಹೆಚ್ಚುವರಿ ಆದಾಯ ಪಡೆಯಬ ಹುದಾಗಿದೆ. ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು, ಬೆಳೆಯ ವಿಧ ಮತ್ತು ಕಟಾವು ಅವಧಿಯ ಆಧಾರದ ಮೇಲೆ ಕಾರಿಡಾರ್ ಮಾದರಿಯಲ್ಲಿ ಸ್ಥಾಪಿಸುವುದು. ಈ ಯೋಜನೆ ಯನ್ನು ಅನುಷ್ಠಾನ ಮಾಡಲು ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳು, ಸೇವಾದಾರ ಸಂಸ್ಥೆಗಳು, ವೈಯ ಕ್ತಿಕ ಫಲಾನುಭವಿಗಳು ಹಾಗೂ ನೋಂದಾಯಿತ ಸಂಘ ಸಂಸ್ಥೆಗಳು (ಎಫ್‌ಪಿಓ ಒಳಗೊಂಡಂತೆ) ಭಾಗವಹಿಸಬಹುದು.

ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಹಾಗೂ ಸಂಘ-ಸಂಸ್ಥೆಗಳಿಗೆ ಗರಿಷ್ಠ ಶೇ.70 ರಂತೆ (ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆ ಅಥಾವ ಎಫ್‌ಪಿಓ ಒಳಗೊಂಡಂತೆ) (ಗರಿಷ್ಟ ರೂ.50 ಲಕ್ಷ ಸಹಾಯಧನ) ಸಹಾಯಧನ ಪಡೆಯಲು ಅವಕಾಶವಿರುತ್ತದೆ.

ಎಫ್‌ಪಿಓ ಒಳಗೊಂಡ ಸಂಘ-ಸಂಸ್ಥೆಗಳು, ಟ್ರಸ್ಟ್‌ಗಳು ಮಾತ್ರ ಕಂಬೈಂಡ್ ಹಾರ್ವೆಸ್ಟರ್‌ಗಳನ್ನು ಒಳಗೊಂಡ "ಕೋಂಬೋ ಹಾರ್ವೆಸ್ಟರ್ ಹಬ್"ಗೆ ಅರ್ಜಿಯನ್ನು ಸಲ್ಲಿ ಸಲು ಅವಕಾಶವಿದ್ದು, ಕೃಷಿ ಯಂತ್ರೋಪಕರಣವಾರು ನಿಗ ದಿಪಡಿಸಿದ ಗರಿಷ್ಠ ಸಹಾಯಧನವನ್ನು ಒದಗಿಸಲಾಗುವುದು.

ಸಹಾಯಧನವನ್ನು 'ಕ್ರೆಡಿಟ್ ಲಿಂಕ್ಡ್ ಬ್ಯಾಕ್ ಎಂಡೆಂಡ್ ಸಬ್ಸಿಡಿ' (Credit Linked Back Ended Subsidy) ಮುಖಾಂತರ ಬಿಡುಗಡೆ ಮಾಡಲಾಗುವುದು. ಆಯ್ಕೆಯಾದ ಫಲಾನುಭವಿಗಳು ಹಾಗೂ ಸಂಘ-ಸಂಸ್ಥೆಗಳು ಕೃಷಿ ಮೂಲಭೂತ ಸೌಕರ್ಯ ನಿಧಿ (ಆರ್ಟಿಕಲ್ಚರಲ್ ಇನ್ ಪ್ರೊಸ್ಟ್ರಕ್ಚರ್ ಪಂಡ್)ಯ ಸಾಲದ ನೆರವು ಪಡೆಯಲು ಸಹ ಅವಕಾಶವಿರುತ್ತದೆ.

ಸಹಕಾರ ಸಂಘಗಳ ನಿಬಂಧನೆಯಂತೆ ಕಂಪನಿ ಕಾಯ್ದೆಯಡಿ ನೋಂದಾಯಿಸಿದ ಸಂಘ-ಸಂಸ್ಥೆಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತವೆ. ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆಗಳ, ಕೃಷಿ ಯಂತ್ರೋಪಕರಣಗಳ ಬ್ಯಾಂಕ್, ರೈತ ಉತ್ಪಾದಕ ಸಂಸ್ಥೆ ಗಳು ಹಾಗೂ ಇತರೆ ಸಂಘ-ಸಂಸ್ಥೆಗಳು ರಾಜ್ಯಾದ್ಯಂತ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುತ್ತದೆ.

6 ಅಥವಾ 9 ವರ್ಷಗಳ ಕಾಲ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಮತ್ತು ತಪಾಸಣೆಯಲ್ಲಿ ಸಂಪೂರ್ಣವಾಗಿ ಲೆಕ್ಕ-ಪತ್ರ ಹಾಗೂ ಯಂತ್ರೋಪಕರಣಗಳನ್ನು ಹಾಜರುಪಡಿಸಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಸಹಾಯಕ ಕೃಷಿ ನಿರ್ದೇಶಕರು ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೇಲ್ಕಂಡ ಎಲ್ಲಾ ಅಂಶಗಳನ್ವಯ ಪರಿಶೀಲಿಸಿ ಸಂಬಂಧಿಸಿದ ಉಪ ಕೃಷಿ ನಿರ್ದೇಶಕರ ಮುಖಾಂತರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿ ಸಬೇಕು. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಅಥಾವ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಿ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಕೆಟ್ಟ ಹವ್ಯಾಸಗಳು ಸಾಧನೆಗೆ ಅಡ್ಡಿ

ಮೊದಲ ಪುಟದಿಂದ

ವಿಶೇಷ ಉಪನ್ಯಾಸಕರಾಗಿ ಹಿಟ್ನಾಳ್‌ನ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಬಸವರಾಜ ಟಿ.ಹೆಚ್.ಮಾತನಾಡಿ, ದೇಶದ ಶ್ರೇಯೋಭಿವೃದ್ಧಿ ಎಂದರೆ ಅದು ಪ್ರಜೆಗಳ ಆರೋಗ್ಯ ಆಗಿರುತ್ತದೆ. ಅನ್ನ, ಆಶ್ರಯ, ಶಿಕ್ಷಣ ಮತ್ತು ಆರೋಗ್ಯ ಕೊಡುವುದು ಸಹ ಸರ್ಕಾರದ ಆದ್ಯತೆಯ ಕಾರ್ಯವಾಗಿರುವುದರ ಹಿಂದಿನ ಸಮಾಜಹಿತದ ಉದ್ದೇಶವನ್ನು ಅರಿಯಬೇಕು. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ವಿದ್ಯಾವಂತರೇ ಆರೋಗ್ಯದ ಕಡೆ ಗಮನ ಹರಿಸದೇ ಸಮಸ್ಯೆಗಳನ್ನು ಸೃಷ್ಟಿಸುವುದು ನೋವಿನ ಸಂಗತಿಯಾಗಿದೆ. ನುಡಿದಂತೆ ನಡೆದ ಡಾ.ಮಹಾಂತ ಶಿವಯೋಗಿಗಳನ್ನು ನೆನೆಯುವುದರ ಜೊತೆಗೆ ಅರಿವಿನ ಜ್ಞಾನವನ್ನು ಜಗತ್ತಿಗೆ ಬಿತ್ತಿದ ಬಸವಣ್ಣನವರು, ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಮೌಲ್ಯಗಳನ್ನು ನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡು ನಡೆಯೋಣ ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಅವರು ಪ್ರಾಸ್ತಾವಿಕ ಮಾತನಾಡಿ, ಡಾ.ಮಹಾಂತ ಶಿವಯೋಗಿಗಳು ವ್ಯಸನಮುಕ್ತ ಆಂದೋಲನದ ಹರಿಕಾರರಾಗಿದ್ದಾರೆ. ಶ್ರೀಗಳ ಜನ್ಮದಿನದ ನಿಮಿತ್ತ ರಾಜ್ಯ ಸರ್ಕಾರವು ಪ್ರತಿ ವರ್ಷ ಆಗಸ್ಟ್ 1 ನ್ನು ವ್ಯಸನ ಮುಕ್ತ ದಿನವನ್ನಾಗಿ ಆಚರಿಸುತ್ತಿದೆ. ವಿದ್ಯಾರ್ಥಿ ಯುವಜನರು ದುಶ್ಚಟಗಳಿಂದ ದೂರವಾಗಿ ಆರೋಗ್ಯಕರ ಜೀವನ ನಡೆಸುವ ಸಂಕಲ್ಪ ಮಾಡಿ, ಶ್ರೀಗಳು ಹೇಳಿದ ಸನ್ಮಾರ್ಗದಲ್ಲಿ ನಡೆಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ. ಮಹಾಂತ ಶಿವಯೋಗಿಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವಿಸಲಾಯಿತು.

ಶಾಲಾ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ಶಿಕ್ಷಣಾಧಿಕಾರಿ ಮಂಜುನಾಥ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಸಮಾರಂಭದಲ್ಲಿ ಸಹಾಯಕ ಆಯುಕ್ತರಾದ ವಿವೇಕಾನಂದ ಪಿ., ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಂ ಪಾಶಾ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ರಾಮಚಂದ್ರಪ್ಪ ಕೆ.ಬಿ., ಜಿಲ್ಲಾ ವಿಕಲಚೇತನರ ಕಲ್ಯಾಣ ಇಲಾಖೆಯ ಅಧಿಕಾರಿ ಅವಿನಾಶ ಗೋಟಖಿಂಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮುತ್ತು ದೊಡ್ಡಮನಿ ಹಾಗೂ ಇನ್ನೀತರರು ಇತರರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಶಿಕ್ಷಕರಾದ ಕೆ.ಎಂ.ತಾಯಪ್ಪ, ಡಿ.ಎಸ್.ರತೀಶ್, ಅಬ್ದುಲ್ ಕಲಾಂ, ಶಶಿರೇಖಾ, ಲತಾ ಕುಮಾರಿ ಹಾಗೂ ಟಿ.ಬಿ.ಡ್ಯಾಮ್ ಸರ್ಕಾರಿ ಪ್ರೌಢಶಾಲೆ, ವಾಲ್ಮೀಕಿ ಪ್ರೌಢಶಾಲೆ ಸೇರಿದಂತೆ ವಿವಿಧ ಶಾಲಾ ಕಾಲೇಜುಗಳ ಮತ್ತು ವಸತಿ ನಿಲಯದ ವಿದ್ಯಾರ್ಥಿಗಳು ಇದ್ದರು. ಶಿಕ್ಷಕಿ ಪದ್ಮಜಾ ಹಾಗೂ ವಿದ್ಯಾರ್ಥಿನಿಯರು ನಾಡಗೀತೆ ಹೇಳಿದರು.

# ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿಗಾಗಿ ಪುಸ್ತಕಗಳ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ:**

ಕರ್ನಾಟಕ ಬಾಲವಿಕಾಸ ಅಕಾಡೆಮಿಯಿಂದ ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿಗಾಗಿ ಪುಸ್ತಕಗಳ ಆಹ್ವಾನಿಸಲಾಗಿದೆ. ಕರ್ನಾಟಕ ಬಾಲವಿಕಾಸ ಆಕಾಡೆಮಿಯು 2023ನೇ ಸಾಲಿನಲ್ಲಿ ಮಕ್ಕಳ ಕ್ಷೇತ್ರದಲ್ಲಿ ರಚಿಸಲ್ಪಟ್ಟ ಆಯ್ದ ಉತ್ತಮ ಪುಸ್ತಕಗಳಿಗೆ "ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿ" ಯನ್ನು ಪ್ರದಾನ ಮಾಡಲು ಉದ್ದೇಶಿಸಿದ್ದು, ಆಯಾ ಸಾಲಿನ ಅವಧಿಯಲ್ಲಿ ಅಂದರೆ ಜನೇವರಿಯಿಂದ ಡಿಸೆಂಬರ್ ತಿಂಗಳ ಅಂತ್ಯದ ಅವಧಿಯಲ್ಲಿ ಪ್ರಕಟಗೊಂಡ ಸ್ವರಚಿತ ಕವನ ಸಂಕಲನ, ಕಥಾ ಸಂಕಲನ, ನಾಟಕ, (ಪಠ್ಯಾಧಾರಿತ ಬಿಟ್ಟು) ಮಕ್ಕಳ ಕಾದಂಬರಿ, ವೈಜ್ಞಾನಿಕ ಲೇಖನಗಳ ಸಂಕಲನ, ಅನುವಾದಿತ ಕೃತಿ (ಯಾವುದೇ ಪ್ರಕಾರದ ಮಕ್ಕಳ ಸಾಹಿತ್ಯ), ಮಕ್ಕಳ ಸಾಹಿತ್ಯ ವಿಮರ್ಶಾ ಕೃತಿ, ಹೀಗೆ ಏಳು ಪ್ರಕಾರದ ಮಕ್ಕಳ ಸಾಹಿತ್ಯದ ಕೃತಿಗಳನ್ನು ಪ್ರಶಸ್ತಿಗಾಗಿ ಆಯ್ಕೆ ಮಾಡಲಾಗುತ್ತಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 0836-2465490, ಸಂಪರ್ಕಿಸಿ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**02–08–2024 – ಶುಕ್ರವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅರ್ದ್ರ |
| ಯೋಗ | : ಹರ್ಷಣ |
| ಕರಣ | : ವಾಣಿಜ |
| ಸೂರ್ಯೋದಯ | : 05:59:15 |
| ಸೂರ್ಯಾಸ್ತ | : 19:06:49 |
| ರಾಹು | : 10:55–12:33 |
| ಯಮಘಂಡ | : 15:50–17:28 |
| ಗುಳಿಕ | : 07:38–09:16 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 01–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.81 ಅಡಿ |
| ಒಳ ಹರಿವು | 125373 ಕ್ಯುಸೆಕ್ |
| ಹೊರ ಹರಿವು | 154706 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 97.143 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1625.81 ಅಡಿ |
| ಒಳ ಹರಿವು | 36766 ಕ್ಯುಸೆಕ್ |
| ಹೊರ ಹರಿವು | 2066 ಕ್ಯುಸೆಕ್ |
| ಸಾಮರ್ಥ್ಯ | 79.168 ಟಿಎಂಸಿ |

# ರೈತರ ಶ್ರೇಯೋಭಿವೃದ್ಧಿಗೆ ಕೈಜೋಡಿಸಿ

## ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಹೇಳಿಕೆ । ತೊಗರಿ ಸಸಿ ನಾಟಿ ಪದ್ಧತಿ ಪ್ರಾತ್ಯಕ್ಷಿಕೆ

**■ ಹಂಪಿ ಟೈಮ್ಸ್ ಕೂಡ್ಲಿಗಿ**

ಮಳೆಯನ್ನೇ ನಂಬಿ ಬದುಕುವ ರೈತರ ಶ್ರೇಯೋಭಿವೃದ್ಧಿಗೆ ಎಲ್ಲರು ಶ್ರಮಿಸಬೇಕಾಗಿದೆ ಎಂದು ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಹೇಳಿದರು.

ತಾಲೂಕಿನ ಗುಂಡಿನಹೊಳೆಯಲ್ಲಿ ಕೃಷಿ ಇಲಾಖೆಯ ಬೀಜೋತ್ಪಧಾನೆ ಕೇಂದ್ರದಲ್ಲಿ ಕೃಷಿ ಇಲಾಖೆಯಿಂದ ಹಮ್ಮಿಕೊಂಡಿದ್ದ 2024–25 ನೇ ಸಾಲಿನ ಜಿಲ್ಲಾ ಮಟ್ಟದ ಮುಂಗಾರು ಹಂಗಾಮಿನ ದ್ವೈಮಾಸಿಕ ಕಾರ್ಯಗಾರ ಹಾಗೂ ತೊಗರಿ ಸಸಿ ನಾಟಿ ಪದ್ದತಿ ಪ್ರಾತ್ಯಕ್ಷಿಕೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಬಂದು ರೈತರ ಆದಾಯ ಹೆಚ್ಚಿಸುವಂತಹ ಬೆಳೆಗಳ ಅಭಿವೃದ್ಧಿ ಪಡಿಸಬೇಕು ಎಂದರು.

ಕೃಷಿ ಉಲಾಖೆಯ ಜಂಟಿ ನಿರ್ದೇಶಕ ಶರಣಪ್ಪ ಮುದಗಲ್ ಮಾತನಾಡಿ, ತೊಗರಿ ಬಿತ್ತನೆ ಮಾಡುವಾಗ ಗಿಡದಿಂದ ಗಿಡಕ್ಕೆ 2 ಅಡಿ, ಸಾಲಿನಿಂದ ಸಾಲಿಗೆ 6 ಅಥವಾ 4 ಅಡಿ ಅಂತರ ಇರುವಂತೆ ಬಿತ್ತನೆ ಮಾಡಬೇಕು. ಇದರ ಮಧ್ಯ ಅಂತರ ಬೆಳೆಯಾಗಿ ಬೇರೆ ಬೇರೆ ಬೆಳೆಗಳನ್ನೂ ಬೆಳೆಯಬಹುದಾಗಿದೆ. ಹನಿ ನೀರಾವರಿ ಅಳವಡಿಸಿಕೊಂಡು ನೀರಿನ ಉಳಿತಾಯದ ಜತೆಗೆಹೆಚ್ಚಿನ ಇಳುವರಿಯನ್ನುಪಡೆಯಬಹುದು ಎಂದು ಸಲಹೆ ನೀಡಿದರು.



ಉಪ ಕೃಷಿ ನಿರ್ದೇಶಕ ನಹೀಮ್ ಪಾಷಾ, ಸಹಾಯಕ ಕೃಷಿ ನಿರ್ದೇಶಕ ವಾಮದೇವ ಕೊಳ್ಳಿ, ಬಣಕಾರ ವೀರಭದ್ರಪ್ಪ, ಕಕ್ಕುಪ್ಪಿ ವೀರಭದ್ರಪ್ಪ ಹಾಗೂ ಜಿಲ್ಲೆಯ ವಿವಿಧ ಭಾಗಗಳ ರೈತರು ಪ್ರಾತ್ಯಕ್ಷಿಕೆಯಲ್ಲಿ ಭಾಗಿಯಾಗಿದ್ದರು.

# ಒಳ ಮೀಸಲಾತಿಯ ಸಮ್ಮತಿಗೆ ಸುಪ್ರೀಂ ಕೋರ್ಟ್ ಆದೇಶ : ಸಂಭ್ರಮ

**■ ಹಂಪಿ ಟೈಮ್ಸ್ ಕೊಟ್ಟೂರು**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಅತ್ಯಂತ ಹಿಂದುಳಿದ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವ ಅಧಿಕಾರ ರಾಜ್ಯಗಳಿಗೆ ಇದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಮಹತ್ವದ ತೀರ್ಪು ನೀಡಿದೆ ಹಿನ್ನೆಲೆ ಪಟ್ಟಣದ ದಲಿತ ಸಂಘರ್ಷ ಸಮಿತಿ ಮುಖಂಡರು ಯುವಕರು ಬಸ್ ನಿಲ್ದಾಣದ ಹತ್ತಿರ ಸರ್ಕಲ್ ನಲ್ಲಿ ಪಟಾಕಿ ಸಿಡಿಸಿ,ಜೈ ಘೋಷಣೆ ಕೂಗಿ, ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಮಾತನಾಡಿದ ದಲಿತ ಮುಖಂಡ ಬದ್ದಿ ಮರಿಸ್ವಾಮಿ ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ನೇತೃತ್ವದ ಏಳು ನ್ಯಾಯಾಧೀಶರ ಸಾಂವಿಧಾನಿಕ ಪೀಠ, ಖಅ, ಖಖ ಒಳ ಮೀಸಲಾತಿಗೆ ಒಪ್ಪಿಗೆ ನೀಡಿದೆ, ಈ ಮಹತ್ತರ ತೀರ್ಪು ನೀಡಿದ ನ್ಯಾಯಾಧೀಶರಿಗೆ ಮತ್ತು ಮೀಸಲಾತಿಗಾಗಿ ಹೋರಾಡಿದ ಮಾನ್ಯರಿಗೆ ಹೃದಯ ಪೂರ್ವಕ ಅಭಿನಂದನೆ ಎಂದು ಹರ್ಷವ್ಯಕ್ತಪಡಿಸಿದರು.

ಈ ತೀರ್ಪು ಎಲ್ಲಾ ದಲಿತರ ಪಾಲಿಗೆ ಹೊಸ ಹುಟ್ಟು, ಸಂಭ್ರಮದ ಕಾಲ ಜತೆಗೆ ತಮ್ಮ ಮಕ್ಕಳ ಭವಿಷ್ಯಕ್ಕೆ ಇದು ದಿಕ್ಸೂಚಿ ಎಂದು ಹೇಳಿದರು.

ದಲಿತ ಮುಖಂಡರು ಹನುಮಂತಪ್ಪ ವಕೀಲರು ಮಾತನಾಡಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯಗಳು ಎಸ್‌ಸಿ ಮತ್ತು ಎಸ್‌ಟಿಗಳಲ್ಲಿಯೇ ಒಳ ಮೀಸಲಾತಿ ನೀಡಬಹುದು ಮತ್ತು ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಈ ಮೀಸಲಾತಿ ಜಾರಿಗೆ ತರಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ ರಾಜ್ಯ ಸರ್ಕಾರ ಕಟ್ಟು ನಿಟ್ಟಾಗಿ ಇದನ್ನು ಪಾಲಿಸಬೇಕು, ನಿರ್ಲಕ್ಷಿಸಿದರೆ ಪ್ರತಿಭಟನೆಗೆ ಮುಂದಾಗಬೇಕಾಗುತ್ತೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ದಲಿತ ಮುಖಂಡರು ಬದ್ದಿ ದುರುಗೇಶ್,ಶ್ರೀನಿವಾಸ್, ಪಿ. ಚಂದ್ರಶೇಖರ್ ,ಮೈಲಪ್ಪ,ಬಿ.ಪರುಶುರಾಮ್ ಪಿ,ಅಜ್ಜಯ್ಯ,ಬಿ.ಶಿವರಾಜ್, ಕುಬೇರಪ್ಪ,ಪಿ.ಮಹೇಶ್,ವಿಷ್ಣು,ಅಂಬರೀಶ್, ಬಣಕಾರ್ ಪರಶುರಾಮ, ಕೊಟ್ರೇಶ್ ,ಶಿವಕುಮಾರ್, ಆಟೋ ಚಾಲಕರು ಯುವಕರು ಇದ್ದರು.

## ಸಂಡೂರು ವಿರಕ್ತ ಮಠದ ಪ್ರಭು ಸ್ವಾಮೀಜಿ ಅಭಿಮತ

# ನುಡಿದಂತೆ ನಡೆದ ಶಿಕ್ಷಣ ಪ್ರೇಮಿ ಅಕ್ಕಿ ಕೊಟ್ರಪ್ಪ



**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:**

ಮನುಷ್ಯ ನುಡಿದಂತೆ ನಡೆಯಬೇಕು, ನಡೆದುಕೊಳ್ಳುವಂತೆ ನುಡಿಯಬೇಕು, ಅದರಲ್ಲಿ ಕೊಡುಗೈದಾನಿ, ಶಿಕ್ಷಣ ಪ್ರೇಮಿ ಅಕ್ಕಿ ಕೊಟ್ರಪ್ಪನವರು ಆ ಸಾಲಿನಲ್ಲಿ ನಿಲ್ಲುತ್ತಾರೆ. ಅವರ ಅಗಲಿಕೆಯಿಂದ ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳು ಸೊರಗುತ್ತವೆ ಎಂದು ಸಂಡೂರು ವಿರಕ್ತ ಮಠದ ಪ್ರಭು ಸ್ವಾಮೀಜಿ ಅಭಿಪ್ರಾಯ ಪಟ್ಟರು.

ತಾಲೂಕಿನ ತಂಬ್ರಹಳ್ಳಿ ಗ್ರಾಮದಲ್ಲಿ ದಿ.ಅಕ್ಕಿಕೊಟ್ರಪ್ಪನವರ ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಬಸವ ತತ್ವ ಅನುಯಾಯಿಗಳಾದ ಅವರು, ಕಷ್ಟದಿಂದಲೇ ಬೆಳೆದುಬಂದು ಶ್ರೀಮಂತಿಕೆಯಲ್ಲೂ ಸರಳತನ, ದಾನ, ಧರ್ಮವನ್ನು ಕೈಬಿಡಲಿಲ್ಲ. ಅದರಲ್ಲೂ ಶೈಕ್ಷಣಿಕ, ಸಾಹಿತ್ಯ ಕ್ಷೇತ್ರಗಳಿಗೆ ಸಾಕಷ್ಟು ಸಹಕಾರ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಮಠದಿಂದಲೇ ಅವರಿಗೆ ಬಸವದಳ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು ಎಂದರು.

ಗದಗ ತೋಂಟದಾರ್ಯ ಮಠಕ್ಕೆ 75ಲಕ್ಷರೂ, ನಮ್ಮ ಸಂಡೂರು ಮಠಕ್ಕೆ 1ಲಕ್ಷ ರೂ, ತಂಬ್ರಹಳ್ಳಿ ಪಿಯು ಕಾಲೇಜಿಗೆ 5ಲಕ್ಷ ರೂಗಳ ದೇಣಿಗೆ ನೀಡಿದ್ದರು. ಪದವಿ ಕಾಲೇಜು ಆರಂಭಿಸಿದರೆ 20ಲಕ್ಷ ರೂ.ಗಳನ್ನು ನೀಡುವುದಾಗಿ ಭರವಸೆ ನೀಡಿದ್ದರು. ಅವರ ಕನಸು ನನಸು ಮಾಡುವ ಜವಾಬ್ದಾರಿ ಕುಟುಂಬದವರ ಮೇಲಿದೆ. ಅವರ ಅಗಲಿಕೆ ನಮಗೆ ನೋವು ತರಿಸಿದರೂ ಅವರ ಕಾಯಕ ಮತ್ತು ಅವರ ಹೆಸರು ಚಿರವಾಗಿ ಉಳಿಯುವಂತ ಕೆಲಸಮಾಡಿದ್ದು ನಮ್ಮೊಂದಿಗೆ ಅವರಿದ್ದಾರೆ ಎನ್ನುವ ನಂಬಿಕೆ ನಮಗಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಗದಗ ಡಂಬಳ ಸಂಸ್ಥಾನ ಮಠದ ಸಿದ್ದರಾಮೇಶ್ವರ ಸ್ವಾಮೀಜಿ ದಿವಂಗತ ಕೊಟ್ರಪ್ಪನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನುಡಿ ನಮನಕ್ಕೆ ಚಾಲನೆ ನೀಡಿದರು. ಈ ವೇಳೆ ಸುಕ್ಷೇತ್ರ ನಂದಿಪುರದ ಡಾ. ಮಹೇಶ್ವರ ಸ್ವಾಮೀಜಿ, ಮಲ್ಲನಕೇರಿ ಚನ್ನಬಸವ ಸ್ವಾಮೀಜಿ, ಹಂಪಸಾಗರದ ಶಿವಲಿಂಗ ರುದ್ರಮುನಿ ಸ್ವಾಮೀಜಿ, ಹಾಲಸ್ವಾಮಿ ಮಠದ ಹಾಲಸಿದ್ದೇಶ್ವರ ಸ್ವಾಮೀಜಿ, ಸಂಡೂರಿನ ಬೊಪ್ಪಕಾನ್ ಕುಮಾರಸ್ವಾಮಿ, ಜಿ.ಪಂ ಮಾಜಿ ಸದಸ್ಯ ಎಚ್.ಬಿ.ನಾಗನಗೌಡ, ಸಾಹಿತಿ ಮೇಟಿ ಕೊಟ್ರಪ್ಪ, ವೀರಶೈವ ಪಂಚಮಸಾಲಿ ಸಮಾಜದ ಮುಖಂಡ ಬಾವಿ ಬೆಟ್ಟಪ್ಪ, ದಿ.ಅಕ್ಕಿಕೊಟ್ರಪ್ಪನವರ ಪತ್ನಿ ಅಕ್ಕಿ ಕೊಟ್ರಮ್ಮ, ಪಂಚಮಸಾಲಿ ಸಮಾಜದ ತಾಲೂಕು ಅಧ್ಯಕ್ಷ ಅಕ್ಕಿ ಶಿವಕುಮಾರ್, ಜಿ.ಪಂ. ಮಾಜಿ ಸದಸ್ಯ ಅಕ್ಕಿ ತೋಟೇಶ್, ಅಕ್ಕಿ ಬಸವರಾಜ, ಗೌರಜ್ಜನವರ ಬಸವರಾಜ, ಗಂಗಾಧರಗೌಡ, ಸುರೇಶ್ ಪಟ್ಟಣಶೆಟ್ಟಿ ಮತ್ತಿತರರು ಇದ್ದರು.

# ಒಳಮೀಸಲಾತಿ ಹೋರಾಟಕ್ಕೆ ಜಯ: ಸಂಭ್ರಮಾಚರಣೆ



**■ ಹಂಪಿ ಟೈಮ್ಸ್ ಹೊಸಪೇಟೆ**

ಮೂರು ದಶಕಗಳ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಹೋರಾಟಕ್ಕೆ ಗುರುವಾರ ಸುಪ್ರೀಂ ಕೋರ್ಟ್ ಗ್ರೀನ್ ಸಿಗ್ನಲ್ ನೀಡಿರುವುದಕ್ಕೆ ವಿಜಯನಗರ ಜಿಲ್ಲೆ ಮಾದಿಗ ಮಹಾಸಭಾ ವತಿಯಿಂದ ಹೊಸಪೇಟೆ ಅಂಬೇಡ್ಕರ್ ವೃತ್ತದಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚುವುದರ ಮೂಲಕ ತಮಟೆಯ ನಾದಕ್ಕೆ ಹೆಜ್ಜೆ ಹಾಕಿ ಹಾಕುವುದರ ಮೂಲಕ ಸಂಬ್ರಮಾಚರಣೆಯನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಸಂವಿಧಾನದ ಪೀಠಿಕೆ ಓದುವುದರ ಮೂಲಕ ಸಂಭ್ರಮಿಸಿದರು. ವಿಜಯನಗರ ಜಿಲ್ಲಾ ಮಾದಿಗ ಸಮುದಾಯದ ಮುಖಂಡರಾದ ಎಂ.ಸಿ.ವೀರಸ್ವಾಮಿ, ಶೇಷು, ಡಾ.ಎ.ವೆಂಕಟೇಶ್, ಯಂಕಪ್ಪ, ಭರತ್ ಕುಮಾರ್.ಸಿ.ಆರ್., ವಿಜಯಕುಮಾರ್, ಕರಿಯಪ್ಪ, ಮರಿದಾಸ್, ಸೋಮಶೇಖರ, ಹನುಮಂತಪ್ಪ, ಓಬಳೇಶ್, ಕೊಲ್ಲಾಪುರಿ, ಶೇಕ್ಷಾವಲಿ, ರವಿ, ಈರಣ್ಣ, ಮಂಜು, ಗಾದಿಲಿಂಗಪ್ಪ, ರಾಮುಡು, ಚಿನ್ನ, ಶೇಖರ್, ಇತರರಿದ್ದರು.

# ದುಶ್ಚಟಗಳ ಭಿಕ್ಷೆ ಬೇಡಿದವರು ಮಹಾಂತ ಶಿವಯೋಗಿಗಳು

## ತಹಸೀಲ್ದಾರ್ ಎಂ.ರೇಣುಕಾ ಹೇಳಿಕೆ । ನಿಮ್ಮ ದುಶ್ಚಟ ಜೋಳಿಗೆಯಲ್ಲಿ ಹಾಕಿ



**■ ಹಂಪಿ ಟೈಮ್ಸ್ ಕೂಡ್ಲಿಗಿ**

ಜೋಳಿಗೆ ಹಿಡಿದು ಜನರಲ್ಲಿನ ದುಶ್ಚಟಗಳ ಭಿಕ್ಷೆ ಬೇಡಿದವರು ಮಹಾಂತ ಶಿವಯೋಗಿಗಳು ಎಂದು ತಹಸೀಲ್ದಾರ್ ಎಂ.ರೇಣುಕಾ ಹೇಳಿದರು. ಪಟ್ಟಣದ ತಾಲೂಕು ಕಚೇರಿಯಲ್ಲಿ ಗುರುವಾರ ತಾಲೂಕು ಆಡಳಿತದ ವತಿಯಿಂದ ಏರ್ಪ ಡಿಸಿದ್ದ ಡಾ. ಮಹಾಂತ ಶಿವಯೋಗಿಗಳ ಜನ್ಮದಿನದ ಅಂಗವಾಗಿ ವ್ಯಸನ ಮುಕ್ತ ದಿನಾಚರಣೆಯಲ್ಲಿ ಮಹಾಂತ ಶಿವಯೋಗಿ ಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಸ್ವಾಮೀಜಿ ಬಂದರೆ ಜತೆಗೊಂದು ಜೋಳಿಗೆ. ನಿಮ್ಮ ದುಶ್ಚಟ ಜೋಳಿಗೆಯಲ್ಲಿ ಹಾಕಿ ಎಂದು ಹೇಳಿದರೆ ಅಲ್ಲಿದ್ದವರು ಗುಟಕಾ, ಸಿಗರೇಟು ಪಾಕೆಟ್ ಹಾಕಿಬಿಡೋರು. ನಂತರ ಎಂದೂ ಬಳಸುತ್ತಿರಲಿಲ್ಲ. ಹೀಗೆ ಸಹಸ್ರಾರು ಮಂದಿ ತಮ್ಮ ದುಶ್ಚಟಗಳನ್ನು ಜೋಳಿಗೆಗೆ ಹಾಕಿ ಈಗ ನಿರುಮ್ಮಳ ಜೀವನ ನಡೆಸುತ್ತಿದ್ದಾರೆ ಎಂದು ಸ್ಮರಿಸಿದರು. ದುರ್ವ್ಯಸನಗಳು ಹಾಗೂ ದುಶ್ಚಟಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಿ, ಮನಪರಿವರ್ತಿಸಿ, ಜನರಲ್ಲಿನ ದುಶ್ಚಟಗಳನ್ನೇ ತಮ್ಮ ಜೋಳಿಗೆಯಲ್ಲಿ ಭಿಕ್ಷೆಯ ರೂಪದಲ್ಲಿ ಸಂಗ್ರಹಿಸಿ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಶ್ರಮಿಸಿದವರು ಡಾ.ಮಹಾಂತ ಶಿವಯೋಗಿಗಳು ಅವರ ತತ್ವಾದರ್ಶಗಳು ಇಂದಿನ ಯುವ ಪೀಳಿಗೆ ಅನುಸರಿಸಿ ಸುಭದ್ರ ರಾಷ್ಟ್ರಕ್ಕೆ ಬುನಾದಿ ಹಾಕೋಣ ಎಂದು ತಿಳಿಸಿದರು. ಇದೇ ಸಂಧರ್ಭದಲ್ಲಿ ಸರ್ಕಾರಿ ಜೂನಿಯರ್ ಕಾಲೇಜಿನ ವಿಧ್ಯಾರ್ಥಿಗಳಿಗೆ ಮದ್ಯ ವ್ಯಸನ ಮುಕ್ತ ಕುರಿತು ಪ್ರತಿಜ್ಞಾ ವಿಧಿ ಭೋದನೆ ಮಾಡಲಾಯಿತು.ಉಪ ತಹಸೀಲ್ದಾರ್ ನೇತ್ರಾವತಿ, ಶಿರಸ್ತೆದಾರ ಎಸ್.ಚಂದ್ರಶೇಖರ, ಕ್ಷೇತ್ರ ಸಮನ್ವಯಾಧಿಕಾರಿ ಎಸ್. ಎಸ್. ಜಗದೀಶ್, ಸಪಪೂ ಕಾಲೇಜ್ ಉಪನ್ಯಾಸಕಿ ಸುಮಾ ಸೇರಿದಂತೆ ಕಂದಾಯ ಅಧಿಕಾರಿಗಳು ಇದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

### ವಿಜ್ಞಾನ: ಅಧ್ಯಾಯ 3. ಜೀವಕ್ರಿಯೆಗಳು

**1.** ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಅಗತ್ಯವಾದ ಅಂಶಗಳು ಯಾವುವು?ಈ ಪ್ರಕ್ರಿಯೆಯಲ್ಲಿ ಜರಗುವ ಘಟನೆಗಳನ್ನು ತಿಳಿಸಿ. ಈ ಪ್ರಕ್ರಿಯೆಯನ್ನು ಸರಿದೂಗಿಸಿದ ರಾಸಾಯನಿಕ ಸಮೀಕರಣದ ಮೂಲಕ ವ್ಯಕ್ತಪಡಿಸಿ. (Apr–2022)

ಉತ್ತರ : ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಅಗತ್ಯವಾದ ಅಂಶಗಳು :
* ಸೂರ್ಯನ ಬೆಳಕು * ಕಾರ್ಬನ್ ಡೈ ಆಕ್ಸೈಡ್ * ಪತ್ರಹರಿತ್ತು * ನೀರು
ಈ ಪ್ರಕ್ರಿಯೆಯಲ್ಲಿ ಜರಗುವ ಘಟನೆಗಳು :
(i) ಕ್ಲೋರೋಫಿಲ್‌ನಿಂದ ಬೆಳಕಿನ ಶಕ್ತಿ ಹೀರುವಿಕೆ.
(ii) ಬೆಳಕಿನ ಶಕ್ತಿಯು ರಾಸಾಯನಿಕ ಶಕ್ತಿಯಾಗಿ ಪರಿವರ್ತನೆಯಾಗುವುದು ಮತ್ತು ನೀರಿನ ಅಣುಗಳು ಹೈಡ್ರೋಜನ್ ಮತ್ತು ಆಕ್ಸಿಜನ್ ಆಗಿ ವಿಭಜಿಸಲ್ಪಡುವುದು.
(iii) ಕಾರ್ಬನ್ ಡೈಆಕ್ಸೈಡ್ ಕಾರ್ಬೋಹೈಡ್ರೇಟ್ ಆಗಿ ಪರಿವರ್ತಿಸಲ್ಪಡುವುದು.
ಈ ಪ್ರಕ್ರಿಯೆಯ ಸರಿದೂಗಿಸಿದ ರಾಸಾಯನಿಕ ಸಮೀಕರಣ:

$$6CO_2 + 12H_2O \xrightarrow[\text{ಸೌರಬೆಳಕು}]{\text{ಕ್ಲೋರೋಫಿಲ್}} \underset{\text{(ಗ್ಲುಕೋಸ್)}}{C_6H_{12}O_6} + 6O_2 + 6H_2O$$

**2.** ಮಾನವನ ಜೀರ್ಣಕ್ರಿಯೆಯಲ್ಲಿ ಈ ಕೆಳಗಿನ ಅಂಗಗಳ ಕಾರ್ಯವೇನು ? (Apr-2019, March-2023)

ಉತ್ತರ : 1. ಜಠರ : • ಜಠರದ ಗೋಡೆಯಲ್ಲಿರುವ ಜಠರ ಗ್ರಂಥಿಗಳು ಹೈಡ್ರೋಕ್ಲೋರಿಕ್ ಆಮ್ಲ, ಪೆಪ್ಸಿನ್ ಮತ್ತು ಲೋಳೆಯನ್ನು ಸ್ರವಿಸುತ್ತವೆ.
• ಹೈಡ್ರೋಕ್ಲೋರಿಕ್ ಆಮ್ಲವು ಪೆಪ್ಸಿನ್ ಕಿಣ್ವದ ಕ್ರಿಯೆಯನ್ನು ಉತ್ತೇಜಿಸುವ ಆಮ್ಲೀಯ ಮಾಧ್ಯಮವನ್ನು ಉಂಟುಮಾಡುತ್ತದೆ.
• ಪೆಪ್ಸಿನ್ ಪ್ರೋಟೀನ್ ಅನ್ನು ಜೀರ್ಣಿಸುತ್ತದೆ.
2. ಯಕೃತ್ : • ಇದು ಪಿತ್ತರಸವನ್ನು ಉತ್ಪತ್ತಿ ಮಾಡುತ್ತದೆ.
•ಪಿತ್ತರಸವು ಆಹಾರವನ್ನು ಕ್ಷಾರೀಯಗೊಳಿಸುತ್ತದೆ.
• ಪಿತ್ತರಸದ ಲವಣಗಳು ಕೊಬ್ಬನ್ನು ಎಮಲ್ಸೀಕರಣಗೊಳಿಸುತ್ತವೆ.
3. ಸಣ್ಣ ಕರುಳು : • ಸಣ್ಣ ಕರುಳಿನಲ್ಲಿ ಆಹಾರದಲ್ಲಿನ ಪ್ರೋಟೀನ್, ಕಾರ್ಬೋಹೈಡ್ರೇಟ್ ಹಾಗೂ ಕೊಬ್ಬುಗಳು ಸಂಪೂರ್ಣ ಪಚನಗೊಳ್ಳುತ್ತವೆ.
• ಕರುಳ ರಸದಲ್ಲಿನ ಕಿಣ್ವಗಳು ಪ್ರೋಟೀನ್‌ಗಳನ್ನು – ಅಮೈನೋ ಆಮ್ಲಗಳಾಗಿ, ಕೊಬ್ಬನ್ನು – ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್‌ಗಳಾಗಿ ಹಾಗೂ ಸಂಕೀರ್ಣ ಕಾರ್ಬೋಹೈಡ್ರೋಟ್‌ಗಳನ್ನು ಗ್ಲುಕೋಸ್ ಆಗಿ ಪರಿವರ್ತಿಸುತ್ತವೆ.
• ಸಣ್ಣ ಕರುಳಿನ ಒಳಗೋಡೆಯಲ್ಲಿನ ವಿಲ್ಲೈಗಳು ಪಚನವಾದ ಆಹಾರವನ್ನು ಹೀರಿಕೊಳ್ಳುತ್ತವೆ.
4. ವಿಲ್ಲೈಗಳು : • ಸಣ್ಣ ಕರುಳಿನ ಒಳಗೋಡೆಯಲ್ಲಿನ ಬೆರಳಿನಾಕಾರದ ರಚನೆಗಳೇ ವಿಲ್ಲೈಗಳು. ಇವು ಪಚನವಾದ ಆಹಾರದಲ್ಲಿನ ಪೋಷಕಾಂಶಗಳನ್ನು ಹೀರಿಕೊಂಡು ರಕ್ತಕ್ಕೆ ಸೇರಿಸುತ್ತದೆ.

**3.** ಮಾನವನಲ್ಲಿ ನಡೆಯುವ ಜೀರ್ಣಕ್ರಿಯೆಯಲ್ಲಿ ಕೆಳಗಿನ ಕಿಣ್ವಗಳ ಕಾರ್ಯವೇನು ?
a] ಟ್ರಿಪ್ಸಿನ್ b] ಲಿಪೇಸ್ c] ಪೆಪ್ಸಿನ್ d] ಅಮೈಲೇಸ್
ಉತ್ತರ :a] ಟ್ರಿಪ್ಸಿನ್ – ಪ್ರೋಟೀನ್ ಅನ್ನು ಜೀರ್ಣಿಸಲು ಸಹಾಯ ಮಾಡುತ್ತದೆ.
b] ಲೈಪೇಸ್ – ಎಮಲ್ಸಿಕರಣಗೊಂಡ ಕೊಬ್ಬನ್ನು ವಿಭಜಿಸುತ್ತದೆ.
c] ಪೆಪ್ಸಿನ್ – ಪ್ರೋಟೀನ್‌ಗಳನ್ನು ಪೆಪ್ಟೈಡ್‌ಗಳಾಗಿ ವಿಭಜನೆ ಮಾಡುತ್ತದೆ.
d] ಅಮೈಲೇಸ್ – ಪಿಷ್ಟವನ್ನು ಶರ್ಕರವಾಗಿ ವಿಭಜನೆ.

**4.** ವಾಯುವಿಕ ಮತ್ತು ಅವಾಯುವಿಕ ಉಸಿರಾಟಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ. (Apr-2022)

| ವಾಯುವಿಕ ಉಸಿರಾಟ | ಅವಾಯುವಿಕ ಉಸಿರಾಟ |
|---|---|
| ಆಕ್ಸಿಜನ್ ಉಪಸ್ಥಿತಿಯಲ್ಲಿ ಜರಗುತ್ತದೆ. | ಆಕ್ಸಿಜನ್ ಅನುಪಸ್ಥಿತಿಯಲ್ಲಿ ಜರಗುತ್ತದೆ. |
| ಮೈಟೋಕಾಂಡ್ರಿಯಾದಲ್ಲಿ ಜರಗುತ್ತದೆ. | ಯೀಸ್ಟ್‌ಕೋಶಗಳಲ್ಲಿ ಜರಗುತ್ತದೆ. |
| ಹೆಚ್ಚು ಶಕ್ತಿ ಬಿಡುಗಡೆಯಾಗುತ್ತದೆ. | ಕಡಿಮೆ ಶಕ್ತಿ ಬಿಡುಗಡೆಯಾಗುತ್ತದೆ. |
| ಅಂತಿಮ ಉತ್ಪನ್ನಗಳು : ಕಾರ್ಬನ್ ಡೈ ಆಕ್ಸೈಡ್ , ನೀರು | ಅಂತಿಮ ಉತ್ಪನ್ನಗಳು : ಕಾರ್ಬನ್ ಡೈ ಆಕ್ಸೈಡ್ , ಎಥನಾಲ್. |

**5.** ಇಮ್ಮಡಿ ಪರಿಚಲನೆ ಎಂದರೇನು ? ಮಾನವನಲ್ಲಿ 4 ಕೋಣೆಗಳ ಮಹತ್ವ ಬರೆಯಿರಿ. (Jun–2022)

ಉತ್ತರ : ರಕ್ತವು ಒಂದು ಸಂಪೂರ್ಣ ಪರಿಚಲನೆಯಲ್ಲಿ ಎರಡು ಬಾರಿ ಹೃದಯವನ್ನು ಪ್ರವೇಶಿಸುವುದರಿಂದ ಇದನ್ನು ಇಮ್ಮಡಿ ಪರಿಚಲನೆ ಎನ್ನುವರು.
• ಆಕ್ಸಿಜನ್ ಯುಕ್ತ ಮತ್ತು ಆಕ್ಸಿಜನ್ ರಿಕ್ತ ರಕ್ತವು ಪ್ರತ್ಯೇಕವಾಗಿ ಸಾಗಾಣಿಕೆಯಾಗುತ್ತದೆ.
• ದೇಹಕ್ಕೆ ಗರಿಷ್ಟ ಪ್ರಮಾಣದ ಆಕ್ಸಿಜನ್ ಒದಗಿಸುತ್ತದೆ.
• ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳಲು ಸಹಾಯಕವಾಗಿದೆ.
• ಅಧಿಕ ಶಕ್ತಿಯ ಅವಶ್ಯಕತೆಯನ್ನು ಪೂರೈಸುತ್ತದೆ.

**6.** ಅಪಧಮನಿಗಳು , ಅಭಿಧಮನಿಗಳ ನಡುವಿನ ವ್ಯತ್ಯಾಸ ತಿಳಿಸಿ

| ಅಪಧಮನಿಗಳು | ಅಭಿಧಮನಿಗಳು |
|---|---|
| ರಕ್ತವನ್ನು ಹೃದಯದಿಂದ ದೇಹದ ವಿವಿಧ ಅಂಗಗಳಿಗೆ ಕೊಂಡೊಯ್ಯುತ್ತವೆ. | ವಿಭಿನ್ನ ಅಂಗಗಳಿಂದ ರಕ್ತವನ್ನು ಸಂಗ್ರಹಿಸಿ ಹೃದಯಕ್ಕೆ ಮರಳಿ ತರುತ್ತವೆ. |
| ರಕ್ತವು ಹೃದಯದಿಂದ ಅತಿಹೆಚ್ಚಿನ ಒತ್ತಡದಲ್ಲಿ ಹೊರಹೊಮ್ಮುವುದರಿಂದ ಅಪಧಮನಿಗಳು ದಪ್ಪವಾದ, ಸ್ಥಿತಿಸ್ಥಾಪಕ ಭಿತ್ತಿಯನ್ನು ಹೊಂದಿವೆ. | ರಕ್ತವು ದೀರ್ಘಕಾಲದವರೆಗೆ ಒತ್ತಡದಲ್ಲಿ ಇರುವುದಿಲ್ಲ ಆದ್ದರಿಂದ ಅವುಗಳಿಗೆ ದಪ್ಪವಾದ ಭಿತ್ತಿಯ ಅಗತ್ಯವಿಲ್ಲ |
| ಇವು ಕವಾಟಗಳನ್ನು ಹೊಂದಿಲ್ಲ | ಇವು ಕವಾಟಗಳನ್ನು ಹೊಂದಿದ್ದು ರಕ್ತವು ಕೇವಲ ಒಂದು ದಿಕ್ಕಿನಲ್ಲಿ ಹರಿಯಲು ಬಿಡುತ್ತವೆ. |

**7.** ಸಸ್ಯಗಳ ತ್ಯಾಜ್ಯ ಪದಾರ್ಥಗಳನ್ನು ಹೊರ ಹಾಕಲು ಬಳಸುವ ವಿಧಾನಗಳು ಯಾವುವು ? (ಮಾರ್ಚ–2022)
• ಎಲೆಗಳ ಉದುರುವಿಕೆಯಿಂದ ಅವುಗಳಲ್ಲಿ ಸಂಗ್ರಹವಾದ ತ್ಯಾಜ್ಯಗಳು ಹೊರಹಾಕಲ್ಪಡುತ್ತವೆ.
• ಕ್ಸೈಲಂಗಳಲ್ಲಿ ಸಂಗ್ರಹವಾದ ತ್ಯಾಜ್ಯಗಳನ್ನು ರಾಳ & ಅಂಟುಗಳ ರೂಪದಲ್ಲಿ ಹೊರಹಾಕುತ್ತವೆ.
• ತೊಗಟೆಯನ್ನು ಕಳಚಿಕೊಳ್ಳುವುದರ ಮೂಲಕ ಹೊರಹಾಕುತ್ತವೆ.
• ಸಸ್ಯಗಳು ತಮ್ಮ ಸುತ್ತಲಿನ ಮಣ್ಣಿನಲ್ಲಿ ಕೂಡಾ ಕೆಲವು ತ್ಯಾಜ್ಯವಸ್ತುಗಳನ್ನು ವಿಸರ್ಜಿಸುತ್ತವೆ.

(ಮುಂದುವರೆಯುತ್ತದೆ.........)

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA